ಮುನ್ನಡೆಯಿಂದ....

# ಸೂಜಿ-ದಾರ

ಗಾರ್ಮೆಂಟ್ಸ್ ಕಾರ್ಮಿಕರ ಸಂಗಾತಿ....



## ವಿಶೇಷ ಸಂಚಿಕೆ

2006


Scanned with OKEN Scanner



← ಸ್ವ-ಸಹಾಯ ಸಂಘದ ಸಭೆಯಲ್ಲಿ...



→ ಕಾರ್ಯಕ್ರಮವೊಂದರಲ್ಲಿ ನೆರೆದ ಗಾರ್ಮೆಂಟ್ಸ್ ಕಾರ್ಮಿಕರು



← ಮಹಿಳಾ ಕಾರ್ಮಿಕರಿಗೆ ರಾತ್ರಿ ಪಾಳಿ ಕಾನೂನು ತಿದ್ದುಪಡಿ ಪ್ರಸ್ತಾವ ವಿರೋಧಿಸಿ ಟೌನ್‌ಹಾಲ್ ಮುಂದೆ ಪ್ರತಿಭಟನೆ




→ ದೆಹಲಿ ಅಗ್ನಿದುರಂತದಲ್ಲಿ ಮೃತಪಟ್ಟ ಕಾರ್ಮಿಕರಿಗೆ ಶ್ರದ್ಧಾಂಜಲಿ ಸಭೆ



← ತರಬೇತಿ ಕಾರ್ಯಕ್ರಮವೊಂದರಲ್ಲಿ...

ಸಂಪಾದಕ...

ಮುನ್ನಡೆ ನಡೆದು ಬಂದ ದಾರಿ.....

ಗೆಳತಿಯರೇ,

ಮುನ್ನಡೆಯ ಎರಡನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ತಮಗೆಲ್ಲ ಶುಭಾಶಯಗಳು. ಎರಡು ವರ್ಷ ಹೇಗೆ ಉರುಳಿ ಹೋಯಿತೋ ತಿಳಿಯುತ್ತಿಲ್ಲ. ಮೈಸೂರು ರಸ್ತೆಯ ಒಂದು ಶಾಲೆಯ ಪುಟ್ಟ ಕೊಠಡಿಯಲ್ಲಿ ಹುಟ್ಟಿಕೊಂಡ "ಮುನ್ನಡೆ" ಇಂದು ಬೆಂಗಳೂರಿನಾದ್ಯಂತ ಬೆಳೆದು ನಿಂತಿದೆ ಎಂದರೆ, ಇದು ನೀವೆಲ್ಲರೂ ಕೈ ಜೋಡಿಸಿ ಬೆಳೆಸಿದ ಫಲವಲ್ಲದೆ ಮತ್ತೇನೂ ಅಲ್ಲ.

ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಕಷ್ಟ, ತೊಂದರೆಗಳನ್ನು ಗುರುತಿಸಿ ನಿವಾರಿಸುವುದು ಮುನ್ನಡೆಯ ಉದ್ದೇಶವಾದರೂ, ಅವರನ್ನು ಕಾರ್ಖಾನೆಯಿಂದ ಹೊರಗೆ, ಸಾಂಸ್ಕೃತಿಕವಾಗಿ ಒಗ್ಗೂಡಿಸುವುದು ಬಹಳ ಮುಖ್ಯ ಎಂಬುದನ್ನು ಮನಗಂಡು, "ಮುನ್ನಡೆ" ಈ ನಿಟ್ಟಿನಲ್ಲೂ ಮುಂದುವರೆದಿದೆ. ಆದ್ದರಿಂದಲೇ ಗಾರ್ಮೆಂಟ್ಸ್ ಮಹಿಳೆಯರ ದೈನಂದಿನ ಜೀವನದಲ್ಲಿಯೂ ಹಾಸುಹೊಕ್ಕಾಗುವಂತೆ 'ಮುನ್ನಡೆ" ಬೆಳೆದು ನಿಂತಿದೆ.

ಮಹಿಳೆಯರು ಕುಟುಂಬದಲ್ಲಿ ಅನುಭವಿಸುತ್ತಿರುವ ಹಿಂಸೆ, ದೌರ್ಜನ್ಯ, ಸಾಮಾಜಿಕ ಜೀವನದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಇದರೊಂದಿಗೆ ಕಾರ್ಖಾನೆಗಳಲ್ಲಿ ಅನುಭವಿಸುತ್ತಿರುವ ಶೋಷಣೆಯ ವಿರುದ್ಧ ಹೋರಾಡಲು ಎಂದೇ ಮುನ್ನಡೆ ಹುಟ್ಟಿಕೊಂಡದ್ದು. ಆದರೆ ಇವೆಲ್ಲಕ್ಕಿಂತ ಮುಖ್ಯವಾಗಿ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಒಂದು ನಿಮಿಷವೂ ಬಿಡುವಿಲ್ಲದಂತೆ, ದಿನಪೂರ್ತಿ ದುಡಿಯುವ ಮಹಿಳೆಯನ್ನು ಸವಾಲು ಮುಖಿಯನ್ನಾಗಿಸಬೇಕು, ಅವಳಿಗೂ ಆತ್ಮಗೌರವವಿದೆ, ಸಮಾಜಕ್ಕೆ, ದೇಶಕ್ಕೆ ಆಕೆ ಬಹುದೊಡ್ಡ ಕೊಡುಗೆ ನೀಡುತ್ತಿದ್ದಾಳೆ ಎಂಬುದನ್ನು ಸುತ್ತಮುತ್ತಲ ವ್ಯವಸ್ಥೆಗೆ ತಿಳಿಸುವುದು ಮುನ್ನಡೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಕೆಲವು ಪುಟ್ಟ ಪುಟ್ಟ ಕೆಲಸಗಳೂ ನಡೆದಿವೆ.

ಹದಿನೆಂಟು, ಇಪ್ಪತ್ತು ವರ್ಷಗಳಿಂದ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿಯೇ ಸೇವೆ ಸಲ್ಲಿಸಿ ತಮ್ಮ ಜೀವನ ಕಳೆದ ಹಿರಿಯ ಮಹಿಳಾ ಕಾರ್ಮಿಕರನ್ನು ಗುರುತಿಸಿ ಗೌರವಿಸಿದುದು, ಮಹಿಳೆಯರಿಗೆ ಎಲ್ಲಿಯೇ ದೌರ್ಜನ್ಯವಾಗಲೀ ಅವರ ನೆರವಿಗೆ ಧಾವಿಸುವುದು, ಮಹಿಳಾ ಹಾಗೂ ಕಾರ್ಮಿಕ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವುದು ಮುಂತಾದುವುಗಳ ಮೂಲಕ "ಮುನ್ನಡೆ" ಗಾರ್ಮೆಂಟ್ಸ್ ಮಹಿಳೆಯರನ್ನು, ಅವರ ಬದುಕನ್ನು ಅವರ ಕಷ್ಟ ಸುಖಗಳನ್ನು ಸಮಾಜಕ್ಕೆ ಪರಿಚಯ ಮಾಡಿಕೊಡಲು ಯತ್ನಿಸುತ್ತಿದೆ, ಯಶಸ್ವಿಯೂ ಆಗುತ್ತಿದೆ.

ಮನೆಗಳ ಹತ್ತಿರ ಐದರಿಂದ ಹತ್ತು ಮಂದಿ ಮಹಿಳೆಯರು ಸೇರಿ "ನಮ್ಮ ಸಮಿತಿ" ರಚಿಸಿಕೊಳ್ಳುತ್ತಿರುವ ಹಿನ್ನೆಲೆಯೂ, ಮುನ್ನಡೆಯನ್ನು ಜನಗಳ ಮಧ್ಯೆ ಬೆಳೆಸುವುದೇ ಆಗಿದೆ. ಈ ಮಹಿಳೆಯರು ತಮಗೆ ನೀರಿಗೆ ತೊಂದರೆಯಾದರೆ, ಅಥವಾ ಬೇರಾವುದೇ ಸಮಸ್ಯೆಯಾದರೂ ಒಗ್ಗಟ್ಟಾಗಿ ಹೋರಾಡಿ ಪರಿಹರಿಸಿಕೊಂಡಿರುವ ಘಟನೆಗಳೂ ನಡೆದಿವೆ. ಇದನ್ನೆಲ್ಲ ಗಮನಿಸಿದರೆ ಮುನ್ನಡೆ ಗಾರ್ಮೆಂಟ್ಸ್ ಮಹಿಳೆಯರಿಗೆ ಸುಭದ್ರ ಸಾಮಾಜಿಕ ಜೀವನ ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗುತ್ತಿದೆ ಎನಿಸುತ್ತದೆ

(5ನೇ ಪುಟ ನೋಡಿ)



# 'ಸಂಘಟನೆ' ಮುನ್ನಡೆಸುತ್ತದೆ

● ಡಾ. ವಿಜಯಾ

**ಕಾ**ಯಕ ನಿಷ್ಠೆಯ ಬಗ್ಗೆ ಯಾರ ನೀತಿಬೋಧೆಯ ಅಗತ್ಯವೂ ಇಲ್ಲದೆಯೇ ತನ್ನ ಕಾಯಕವನ್ನು ಬದುಕಿಗೆ ಹೊಂದಿಸಿಕೊಂಡಳು ಮಹಿಳೆ. ಆಕೆ ಯಾವುದೇ ಕ್ಷೇತ್ರದಲ್ಲಿಯಾದರೂ ತನ್ನ ಪರಿಣತಿಯನ್ನು ತೋರಿಸಬಲ್ಲಷ್ಟು ಶ್ರದ್ಧೆಯುಳ್ಳವಳು. ಹಾಗಿದ್ದೂ ಬಹಳಷ್ಟು ಸಂದರ್ಭಗಳಲ್ಲಿ ಕೆಲವೊಂದು ಕಾಯಕಗಳು ಅವಳಿಗೆ ಮಾತ್ರ ಸಾಧ್ಯ, ಕೆಲವು ಅಸಾಧ್ಯ ಎಂಬಂತೆ ಸಾಮಾಜಿಕ ನಿಯಮಗಳು ಆಕೆಯನ್ನು ಒಂದು ಸೀಮಿತ ವಲಯಕ್ಕೆ ಕಟ್ಟಿಹಾಕುವುದುಂಟು. ಅಂಥ ನಿಬಂಧನೆಯ ಜೊತೆಗೇ ಅದನ್ನು ಮೀರಿ ಮುಂದೆ ನಡೆಯಬಲ್ಲ ಸಮರ್ಥಳು ಆಕೆ. ಆದ್ದರಿಂದಲೇ ಈ ಹೊತ್ತು ಯಾವುದೇ ಕ್ಷೇತ್ರದಲ್ಲೂ ಒಬ್ಬರಲ್ಲ ಒಬ್ಬರು ಉತ್ತುಂಗಕ್ಕೇರುವುದನ್ನು ಕಾಣುತ್ತೇವೆ. ಹಾಗೆ ಎತ್ತರದಲ್ಲಿ ಗುರುತಿಸಿಕೊಳ್ಳಲು, ಸಾಧಿಸಲು ಆಕೆ ಅದೆಷ್ಟೋ ಅಗ್ನಿದಿವ್ಯಗಳನ್ನು ಹಾದು ಬರಬೇಕಾಗುತ್ತದೆ. ಯಾವುದೂ ಸರಾಗವಾಗಿ ಸಿಗುವಂಥದ್ದಲ್ಲ. ಅವಳ ಬದುಕು ಅನೇಕ ನಿರ್ಬಂಧ-ನೀತಿಗಳ ನಡುವೆ ಸಾಗಿ ಬರುತ್ತದೆ.

ಆಸಕ್ತಿ, ಪರಿಣತಿಗಳನ್ನು ಎಂದೂ ಪರಿಗಣಿಸದ ಸಮಾಜ ಕೇವಲ ಆರ್ಥಿಕ ಸಂಗತಿಯ ಹಿನ್ನೆಲೆಯಲ್ಲಿ ಆಕೆಯನ್ನು ಕೆಲವು ನಿರ್ಬಂಧಗಳಿಂದ ಬಿಡಿಸಿ ಹೊರಬರಲು ಅನುವು ಮಾಡುತ್ತದೆ. ತನ್ನ ಕಾರ್ಯಕ್ಷಮತೆ, ವಿದ್ಯಾರ್ಹತೆಗಳ ಆಧಾರದ ಮೇಲೆ ಆಯ್ಕೆ ಮಾಡಿಕೊಂಡು ಮಹಿಳೆ ಕುಟುಂಬವಲಯದ ಹೊರಗೆ ಬಂದು ಉದ್ಯೋಗವಲಯದಲ್ಲಿ ಸೇರುತ್ತಾಳೆ. ಈ ಅವಕಾಶಗಳ ಮೂಲಕ ಅವಳಿಗೆ ಬಿಡುಗಡೆ-ಸ್ವಾತಂತ್ರ್ಯ ಎಂಬ ದೊಡ್ಡ ಮಾತನ್ನಾಡುವ ಸಾಮಾಜಿಕ ವ್ಯವಸ್ಥೆಗೆ ಅದಕ್ಕಿಂತ ಮುಖ್ಯವಾಗಿ ದುಡಿದು ಕುಟುಂಬದ ಆರ್ಥಿಕ ಹೊರೆ ಹೊತ್ತುಕೊಳ್ಳಲು ಮತ್ತೆರಡು ಭುಜಗಳು ಬೇಕಾಗಿವೆ. ಈ ಅವಕಾಶವನ್ನೇ ಆಕೆ ತನ್ನ ಜವಾಬ್ದಾರಿಗಳ ಜೊತೆಗೇ ಬಿಡುಗಡೆಯ ಮಾರ್ಗವಾಗಿಯೂ ಭಾವಿಸಿ ಪ್ರೀತಿಯಿಂದ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದಾಳೆ; ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾಳೆ.

ಆದರೆ ಆಕೆಯ ಯಾವ ಸಮಾಧಾನವನ್ನೂ ಸಹಿಸಲಾರದ ಅಥವಾ ಆಕೆ ನೀಡುವ ಪೈಪೋಟಿಯನ್ನು ಎದುರಿಸಲಾಗದ ಪುರುಷ ವ್ಯವಸ್ಥೆ ಅವಳಿಗೆ ವಿಚಿತ್ರ ಕಿರುಕುಳವನ್ನು ನೀಡಲಾರಂಭಿಸುತ್ತದೆ. ಹೀಗಾಗಿ ಅವಳಿಗೆ ಅವನಿಗಿಂತ ಹೆಚ್ಚೇ ದುಡಿದರೂ ಆದಾಯದಲ್ಲಿ ತರತಮ ಮಾಡಲಾಗುತ್ತದೆ. ಆಕೆ ಈ ದುಡಿಯುವ ಸಮಯವನ್ನೇ ತನಗೆ ಗೃಹಬಂಧನದಿಂದ ಮುಕ್ತಿ ಎಂದು ಭಾವಿಸಿ ಸಂತೋಷವಾಗಿರುವುದನ್ನು ಸಹಿಸಲಾಗದೆ ಆಕೆಗೆ ಹಲವು ರೀತಿಯ ಕಿರುಕುಳ ನೀಡತೊಡಗುತ್ತದೆ. ಆಕೆಗೆ ದುಡಿಯುವ ಸ್ಥಳದಲ್ಲಿ ಯಾವುದೇ ಅನುಕೂಲವೂ ಸಿಗದ ಹಾಗೆ ನೋಡಿಕೊಳ್ಳುತ್ತದೆ. ಅವಳಿಗೆ ಪ್ರತ್ಯೇಕವಾ ಶೌಚಾಲಯದ ಸೌಲಭ್ಯವನ್ನು ಒದಗಿಸದಿರುವುದು, ಆಕೆ ತನ್ನ ಪುಟ್ಟ ಕಂದನನ್ನು ನೋಡಿಕೊಳ್ಳುತ್ತಲೇ ಕೆಲಸ ಮಾಡಲು ಅಗತ್ಯವಿರುವ ಸೌಲಭ್ಯ ಒದಗಿಸದಿರುವುದು, ಆಕೆ ಮಗುವಿಗೆ ಮೊಲೆಯೂಡಿಸಿ ಬರಲು ಬೇಕಾಗುವ ಸಮಯವನ್ನು ಮೈಗಳ್ಳತನದ ಪಟ್ಟ ಕಟ್ಟಿ, ಅಷ್ಟು ಸಮಯದ ಸಂಬಳದಲ್ಲಿ ಕಡಿತ ಮಾಡುವುದು, ಅವಳದೇ ಆದ ಕೆಲವು ನೈಸರ್ಗಿಕ ಕಾರಣಗಳಿಂದಾಗುವ ದೈಹಿಕ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ದಾಕ್ಷಿಣ್ಯ ತೋರದೆ ಅದು ಅವಳ ದೌರ್ಬಲ್ಯವೆಂದು ಪರಿಗಣಿಸುವುದು, ಬಸುರಿ-ಹೆರಿಗೆ ಇದಾವುದನ್ನೂ ಗಂಭೀರವಾಗಿ ತೆಗೆದುಕೊಳ್ಳದೆ ರಜೆ ಇತ್ಯಾದಿಗಳ ವಿಷಯದಲ್ಲಿ ನಿರ್ದಯರಾಗುವುದು,- ಹೀಗೆ ಪಟ್ಟಿ ಮಾಡುತ್ತಲೇ ಹೋಗಬಹುದು. ಆದರೆ ಇಂಥ ಎಲ್ಲ ಸಮಸ್ಯೆಗಳಿಗೂ ತನಗೆತಾನೇ ಪರಿಹಾರ ಕಂಡುಕೊಳ್ಳುವ ಮಹಿಳೆ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುತ್ತಾಳೆ.

ಉದ್ಯೋಗದಲ್ಲಿ ಮೇಲ್ದರ್ಜೆಯವರಿಗೆ ಕೆಲವು ಸವಲತ್ತುಗಳು ಸಿಗುತ್ತವೆ. ಅಲ್ಲಿಯೂ ಅವಳ ಸಮಸ್ಯೆಗಳೆಲ್ಲ ಪರಿಹಾರವಾಗುವುದಿಲ್ಲ, ಅವುಗಳ ಸ್ವರೂಪವೇ ಬೇರೆ. ಅನಕ್ಷರಸ್ಥರು ಅಥವಾ ಕೊಂಚ ಕಡಿ ಓದಿದವರು ಆರಿಸಿಕೊಳ್ಳುವ ಉದ್ಯೋಗಳು ಬೇರೆಯವೇ ಇರುತ್ತವೆ.



ಆ ಬಗೆಯ ಉದ್ಯೋಗಗಳಲ್ಲೂ ದರ್ಜೆಗಳಿರುತ್ತವೆ. ಪೌರ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಬೀಡಿ ಕಟ್ಟುವವರು ಹೀಗೆ..... ಈಚೆಗೆ ಬಹಳಷ್ಟು ಸುದ್ದಿಯಲ್ಲಿರುವ ಮತ್ತು ಅಧಿಕ ಸಂಖ್ಯೆಯ ಉದ್ಯೋಗಗಳು ಸೃಷ್ಟಿಯಾಗುತ್ತಿರುವ ಇನ್ನೊಂದು ಪ್ರಮುಖ ಉದ್ಯಮ ಸಿದ್ಧಉಡುಪುಗಳದ್ದು.

ದಿನೇ ದಿನೇ ವಿದೇಶೀ ಮಾರುಕಟ್ಟೆಯ ವಹಿವಾಟು ಏರುತ್ತಿದೆ. ಅನೇಕ ಸಂದರ್ಭದಲ್ಲಿ ಅಲ್ಲಿಯವರಿಗಾಗೇ ಇಲ್ಲಿಯವರು ದುಡಿಯುವುದು ಹೆಚ್ಚಾಗಿ ಕಂಡುಬರುತ್ತಿದೆ. ವಿದೇಶಗಳಲ್ಲಿಯ ಲೇಬರ್‌ಗಿಂತ ಭಾರತೀಯ ಕಾರ್ಮಿಕರ ಬೆಲೆ ಅಗ್ಗ. ಹೀಗಾಗಿ ಇಲ್ಲಿ ಬಿಡಿಬಿಡಿಯಾಗಿ-ಇಡಿಯಾಗಿ ಕೂಡಾ-ಕೆಲವು ಸರಕುಗಳು ತಯಾರಾಗುತ್ತವೆ. ಅಂಥವುಗಳಲ್ಲಿ ಈ ಸಿದ್ಧಉಡುಪುಗಳ ಭಾಗ ಮುಖ್ಯವಾದುದು. ಇಲ್ಲಿ ಬಹುತೇಕ ಮಹಿಳೆಯರೇ ಉದ್ಯೋಗಿಗಳು. ಒಂದು ರೀತಿಯ 'ಯಜಮಾನಿಕೆ'ಯ ಕೆಲಸಗಳಲ್ಲಿ ಪುರುಷರಿರುತ್ತಾರೆ. ಅಂಥ 'ಯಜಮಾನಿಕೆ'ಯನ್ನು ತನ್ನ ಪುರುಷ ಅಹಂಕಾರದ ಸಂಕೇತವಾಗಿ ಬಳಸುವವರೇ ಅಧಿಕ. ಈ ಅಧಿಕ ಸಂಖ್ಯೆಯಲ್ಲಿರುವ ಸಿದ್ಧಉಡುಪು ಉದ್ಯಮಗಳಲ್ಲಿ ಶೇ. 80 ಭಾಗ ಮಹಿಳೆಯರೇ ಕೆಲಸಮಾಡುತ್ತಾರೆ. ಇನ್ನುಳಿದವರಲ್ಲಿ ಮಾಲೀಕರನ್ನು ಬಿಟ್ಟರೆ ಅವರನ್ನು ನೆರಳಿನಂತೆ ಅನುಕರಿಸುವ ದರ್ಪಿಷ್ಟ ಅಧಿಕಾರಿಗಳು ಇರುತ್ತಾರೆ. ಇಲ್ಲಿ ಕೇವಲ ಕೆಲಸಗಳೇ ಅಲ್ಲದೆ ಬೇರೆ ಬೇರೆ ರೀತಿಯ ದುಡಿಮೆಗಳಿಗೂ ಯುವತಿಯರನ್ನು ಬಳಸಿಕೊಳ್ಳುವ ಹುನ್ನಾರವೂ ಇರುವ ಸಾಧ್ಯತೆ ಇದೆ. ಕೆಲವು ವರ್ಷಗಳ ಹಿಂದೆ ಇಂಥ ಒಂದು ಸಿದ್ಧಉಡುಪು ಕಾರ್ಖಾನೆಯ ಮಾಲೀಕ ತನ್ನ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಪ್ರಾಯದ ಹುಡುಗಿಯರನ್ನು ಲೈಂಗಿಕ ಕಾರ್ಯಕರ್ತೆಯರ ಹಾಗೆ ಬಳಸುವ ಪ್ರಯತ್ನ ಮಾಡಿದ್ದೂ ಉಂಟು. ಆತ ಹಾಗೆ ತನ್ನ ಉದ್ಯೋಗಿಗಳನ್ನು ಬೆದರಿಸಿ ಬಳಸಿಕೊಳ್ಳುವ ಮೂಲಕ ಹೊಸ ಬಲ್ಕ್ ಆರ್ಡರ್‌ಗಳನ್ನು ಗಿಟ್ಟಿಸುತ್ತಿದ್ದ; ಪೊಲೀಸರು, ಇತರ ಅಧಿಕಾರ ವರ್ಗಗಳವರನ್ನು ಸರಿಮಾಡಿಕೊಂಡು ಅನೇಕ ವ್ಯವಹಾರಗಳನ್ನು ಸಂತೋಷವಾಗಿ ನಡೆಸುತ್ತಿದ್ದ. ಇಂಥ ಒಂದು ಪ್ರಸಂಗದಲ್ಲಿ ಈ ವ್ಯವಸ್ಥೆಯನ್ನು ಪ್ರತಿಭಟಿಸಿ ಬಹಿರಂಗ ಮಾಡಿದ ಯುವತಿಯೊಬ್ಬಳ ಕೊಲೆಯೇ ಆಗಿತ್ತು. ಇಂಥ ಅನೇಕ ಅನ್ಯಾಯಗಳನ್ನು ತಡೆಗಟ್ಟಲು, ದುಡಿಯಲು ಬಂದ ಮಹಿಳೆ ಗೌರವದಿಂದ ದುಡಿದು ಸಂಪಾದನೆ ಮಾಡಲು ಅವಳಿಗೆ ರಕ್ಷಣೆ ಬೇಕಾಗುತ್ತದೆ. ಅದು ಸಾಧ್ಯವಾಗಬೇಕಾದರೆ ಅವರು ಸಂಘಟಿತರಾಗಬೇಕು. ಹೀಗೆ ಸಂಘಟನೆಗಳಾಗುವುದಕ್ಕೆ ಯಜಮಾನ ವ್ಯವಸ್ಥೆ ಅವಕಾಶ ಮಾಡಿಕೊಡುವುದಿಲ್ಲ. ಸಂಘಟಿತ ಕಾರ್ಮಿಕರ ಬಲ ಎಂಥದೆಂದು ಅವನಿಗೆ ತಿಳಿದಿದೆ. ಸಂಘಟಿತರಾಗಲು ಬಿಡದೆ ಅವನದೇ ಆದ ರಾಜಕೀಯ ಮಾಡುತ್ತಾನೆ. ಒಡೆದಾಳುವ ನೀತಿ, ಬೆದರಿಕೆ, ಆಕೆಯ ಭಾವನಾತ್ಮಕ ನಿಲುವುಗಳನ್ನು ಬಳಸಿಕೊಂಡು ಬೇಕಾದಹಾಗೆ ತಿರುಗಿಸುವ ಜಾಣತನ ಇತ್ಯಾದಿ ಮಾರ್ಗಗಳನ್ನು ಕಂಡುಕೊಳ್ಳುತ್ತಾನೆ.



ಆದರೆ ಸಂಘಟನೆ ತನಗೆ ಎಂಥ ಶಕ್ತಿಯನ್ನು ಕೊಡಬಲ್ಲದು ಎಂಬ ತಿಳಿವಳಿಕೆ ಆಕೆಗೆ ಇರಬೇಕು. ಇಲ್ಲವಾದರೆ ತಿಳಿಸಿ ಹೇಳಲು ಹೊರಗಿನವರು ಸಹಾಯಮಾಡಬೇಕು. ಕೆಲವು ವರ್ಷಗಳ ಹಿಂದೆ 'ದುಡಿಯುವವರ ಹೋರಾಟ' ಎಂಬ ಪತ್ರಿಕೆ ಹೊರತರುತ್ತಿದ್ದ ಕೆಲವು ಪ್ರಗತಿಪರ ನಿಲುವಿನ ಮಿತ್ರರು ಈ ಕ್ಷೇತ್ರದ ಕಾರ್ಮಿಕರನ್ನು ಸಂಘಟಿಸಲು ಶ್ರಮಪಟ್ಟದ್ದುಂಟು. ಈಗ ಸಿದ್ಧಉಡುಪು ಕಾರ್ಖಾನೆಯಲ್ಲಿ ದುಡಿವ ಮಹಿಳೆಯರ ನೆರವಿಗಾಗಿ 'ಮುನ್ನಡೆ' ಎಂಬ ಸಂಘಟನೆ ಮುಂದೆ ಬಂದಿದೆ. ಸಾಕಷ್ಟು ಸಾಧಿಸಿದೆ. ಸಂಘಟಿತರಾಗಿ ಬೇಡಿಕೆ ಮುಂದಿಟ್ಟಾಗ ಯಾವುದೇ ವೈಯಕ್ತಿಕ ಅಪಾಯಗಳಿಗೂ ಸಿಲುಕದೆ ಹಕ್ಕಿನಿಂದಲೇ ಸವಲತ್ತುಗಳನ್ನು ಪಡೆಯಬಲ್ಲೆವು ಎಂಬ ತಿಳಿವಳಿಕೆ ಕಾರ್ಮಿಕರಲ್ಲಿ ಮೂಡಿಸುವುದು ಮುಖ್ಯ. ದುಡಿವವರೆಲ್ಲ ಒಂದು, ಅವರ ಸಮಸ್ಯೆಗಳು ನಮ್ಮದೂ ಹೌದು. ಇಂದು ನನ್ನದಲ್ಲವಾದರೂ ನಾಳೆ ನನ್ನ ಬಳಿಗೆ ಆ ಸಮಸ್ಯೆ ಬಂದೇ ಬರುತ್ತದೆ ಎಂಬ ತಿಳಿವಳಿಕೆ ಇದ್ದರೆ ಒಬ್ಬರ ಸಮಸ್ಯೆಗೆ ಮತ್ತೊಬ್ಬರು ಸ್ಪಂದಿಸುತ್ತಾರೆ. ಇಂಥಲ್ಲಿ ಒಂದು ಸ್ವರಕ್ಕಿಂತ, ಹತ್ತು-ನೂರು ಕೊರಳುಗಳು ಸೇರಬೇಕು.

ತನ್ನ ಹಕ್ಕುಗಳೇನು, ಯಾವ ಯಾವ ರೀತಿಯಲ್ಲಿ ಕಾನೂನಿನ ನೆರವು ಪಡೆಯಬಹುದು ಎಂಬ ತಿಳಿವಳಿಕೆ ಇರಬೇಕಾದ್ದು, ಇಲ್ಲದವರಿಗೆ ತಿಳಿಸಿ ಹೇಳಬೇಕಾದ್ದು ಮುಖ್ಯ. ಸಮಾಜ, ದೇಶ ಕಟ್ಟಲು, ಅದನ್ನು ಆರ್ಥಿಕವಾಗಿ ಮುನ್ನಡೆಸಲು ಲಕ್ಷಾಂತರ ಕೈಗಳು ದುಡಿಯುತ್ತಿವೆ. ಅವುಗಳ ಬೇಕು ಬೇಡಗಳನ್ನು ಪೂರೈಸುವುದು ನಮ್ಮ ಕರ್ತವ್ಯ. ಹಾಗಾಗದಿದ್ದರೆ ಬೆಟ್ಟವೇ ಸರಿದು ತಲೆಗೆ ಅಪ್ಪಳಿಸುತ್ತದೆ ಎಂಬ ಎಚ್ಚರವನ್ನೂ ಆಳುವವರಿಗೆ ತಿಳಿಸಿ ಕೊಡಬೇಕು.

ಈ ಎಲ್ಲ ಹಿನ್ನೆಲೆಯಲ್ಲಿ ಕಾರ್ಮಿಕರ ಸಂಘಟನೆ ಮುಖ್ಯ. ನಾವು ಸಂಘಟಿತರಾಗಿ ಸಮಸ್ಯೆಗೆ ಉತ್ತರ ಕಂಡುಕೊಳ್ಳುವ, ಅಗತ್ಯವಾದಾಗ ಅದು ಹೋರಾಟಕ್ಕೂ ಸಿದ್ಧವಾಗುವುದಷ್ಟೇ ಅಲ್ಲ ಇತರ ಕ್ಷೇತ್ರಗಳಲ್ಲಿಯ ಸಂಘಟನೆಗಳು ಹೋರಾಡುವಾಗ ಸ್ಪಂದಿಸುವುದೂ ಅಷ್ಟೇ ಮುಖ್ಯ. ದುಡಿಯುತ್ತೇವೆ ದುಡಿದುದಕ್ಕೆ ತಕ್ಕ ಪ್ರತಿಫಲ ಕೊಡಿ. ದುಡಿಯುವ ಜನರಿಗೆ ರಕ್ಷಣೆ ಕೊಡುವುದು ನಿಮ್ಮ ಜವಾಬ್ದಾರಿ. ಅದನ್ನು ಮರೆತು ದೌರ್ಜನ್ಯ ತೋರಿದರೆ ತಕ್ಕ ಪಾಠ ಕಲಿಸುತ್ತೇವೆಂದು ಹೇಳುವ ಧೈರ್ಯ ತುಂಬಿಕೊಳ್ಳಬೇಕು. ಈ ಹಾದಿಯಲ್ಲಿ ನಮ್ಮ ನಡಿಗೆ ಹೂವಿನ ಹಾಸಿಗೆಯಲ್ಲ. ಅನೇಕ ತಡೆಗಳೂ, ಬೆದರಿಕೆಗಳೂ, ಉಪವಾಸ-ವನವಾಸ, ಪ್ರಾಣಹಾನಿ, ಮಾನಹಾನಿ ಮೊದಲಾಗಿ ಅನೇಕ

ಅಪಾಯಗಳೂ ಇವೆ. ಆದರೆ ಅವು ಆ ಕ್ಷಣದ ಆತಂಕಗಳು. ಅದನ್ನು ಧೈರ್ಯದಿಂದ ಎದುರಿಸಿ ದಿಟ್ಟವಾಗಿ ನಿಂತರೆ ನಿರೀಕ್ಷಿತ ಗುರಿ ಸಾಧಿತವಾಗುತ್ತದೆ. ಈ ಮನೋಸ್ಥೈರ್ಯ ಪಡೆಯಲು ಸತತವಾಗಿ ಶ್ರಮಿಸಬೇಕಾಗುತ್ತದೆ. ಈಗಲೇ ದಿನವಿಡೀ ದುಡಿದ ಬಳಲಿಕೆ, ಇನ್ನು ಈ ಹೋರಾಟದ ಕಲಿಕೆಗೆಲ್ಲಿ ಸಮಯ? ತೆಪ್ಪಗಿದ್ದುಬಿಟ್ಟರಾಯಿತು ಎನ್ನಿಸುವುದು ಸಹಜ. ಆದರೆ ಬಿರುಗಾಳಿ ಪಕ್ಕದ ಮನೆಯನ್ನು ಮಾತ್ರ ಆವರಿಸುವುದಿಲ್ಲ, ಮುಂದಿನ ಪಾಳಿ ನಿಮ್ಮದೇ ಆಗಿರುತ್ತದೆ. ಆದ್ದರಿಂದ ನೆರೆಯವರತ್ತಲೂ ಬಿರುಗಾಳಿ ಸುಳಿಯದ ಹಾಗೆ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ. ಅದಕ್ಕೆ ಬೇಕಾದ ಸಿದ್ಧತೆಗಾಗಿ ಇರುವ ಕೊಂಚ ವಿರಾಮ ಸಮಯದಲ್ಲೇ ಒಂದಿಷ್ಟನ್ನು ಬಳಸಿಕೊಳ್ಳಬೇಕಾಗುತ್ತದೆ.

ಸಂಘಟನೆಯಲ್ಲಿ ಸಮಾಧಾನ ಸಿಗುತ್ತದೆ. ಸಾಂತ್ವನ, ಸ್ನೇಹ ಸುಖ, ತಿಳಿವಳಿಕೆ, ಮನೋಲ್ಲಾಸಗಳ ಜೊತೆಗೇ ತನ್ನನ್ನು ರಕ್ಷಿಸಿಕೊಳ್ಳುವ, ತಾನು ದುಡಿಯುವ ಸ್ಥಳದಲ್ಲಿ ತರತಮವಿಲ್ಲದೆ ದುಡಿಮೆಗೆ ತಕ್ಕ ಫಲ, ದುಡಿವ ಸ್ಥಳದಲ್ಲಿ ಸುರಕ್ಷತೆ–ಸೌಲಭ್ಯಗಳು ಸಿಗುತ್ತವೆ. ಸಿಗದಿದ್ದರೆ, ನಾನೊಬ್ಬಳೇ ಅಲ್ಲ ನನ್ನೊಂದಿಗೆ ಇನ್ನೂ ನೂರು–ಸಾವಿರ ಕೊರಳುಗಳು ಹಕ್ಕಿಗಾಗಿ ಕೂಗಲಿವೆ; ಕೈ ಎತ್ತಲಿವೆ ಎಂಬ ಅರಿವು ಮುಖ್ಯ.

ಇಂಥ ತಿಳಿವಳಿಕೆ ಎಲ್ಲಿಂದ ಬಂದರೂ ಸ್ವೀಕರಿಸಬೇಕು. ತನ್ನ ಕಾಲಮೇಲೆ ತಾನು ನಿಂತು, ತನ್ನ ಹಕ್ಕು–ಬೇಡಿಕೆಗೆ ತಾನೇ ಹೋರಾಡುವ, ಇತರರಿಗೂ ಅದನ್ನು ದೊರಕಿಸಿಕೊಡುವ ಸಾಮರ್ಥ್ಯ ಪಡೆದುಕೊಳ್ಳಬೇಕು. ಸಂಘಟಿತರಾಗುವುದು ಸಂಕೋಚ ಪಡುವ ಸಂಗತಿಯಲ್ಲ. ಅದು ಗೌರವದ, ಸ್ವಾಭಿಮಾನ ತಂದು ಕೊಡುವ ಕಾರ್ಯ. ಆತ್ಮಾಭಿಮಾನ, ಇತರರ ಸಂಕಷ್ಟಗಳನ್ನು ತಿಳಿದು ಸ್ಥೈರ್ಯ ತುಂಬುವ ಕೆಲಸ ಸಂಘಟನೆಯಿಂದ ಸುಲಭವಾಗಿ ದಕ್ಕುತ್ತದೆ. ಸಂಘಟಿತರಾಗುವುದನ್ನು ತಡೆದು, ಆಮಿಷವೊಡ್ಡಿ ಒಡೆದಾಳುವ ನೀತಿ ಅನುಸರಿಸುವ ಯಜಮಾನ ವ್ಯವಸ್ಥೆಯ ಬಗ್ಗೆ ಎಚ್ಚರದಿಂದಿರಬೇಕು; ಸಂಘಟನೆಯಿಂದಲೇ ಉತ್ತರಿಸುವಂತಿರಬೇಕು. ಅಸಂಘಟಿತ ಕಾರ್ಮಿಕವಲಯಗಳು ಗಟ್ಟಿಯಾಗಬೇಕಾದರೆ ಸಂಘಟನೆಯತ್ತ ಅವರ ಮನವೊಲಿಸುವ 'ಮುನ್ನಡೆ'ಯಂಥ ಸಂಸ್ಥೆಗಳು ಬೇಕು. ಸಿದ್ಧಉಡುಪುವಲಯದ ಕಾರ್ಮಿಕರ ಸಮಸ್ಯೆಗಳ ಬಹುಮುಖವನ್ನು ತಿಳಿಸಿಕೊಡುವ – ಅವರ ಮುಖವಾಣಿಯಾಗಬಲ್ಲ 'ಸೂಜಿ–ದಾರ'ದಂಥ ಪತ್ರಿಕೆಗಳೂ ಬೇಕು.

ಇಂಥ ಪ್ರಯತ್ನಗಳು ಯಶ ಕಾಣಲು ಸಾಮಾಜಿಕರಿಂದಲೂ ಹೆಚ್ಚಿನ ಬೆಂಬಲ ಸಿಗಲಿ.

□

ಕವನ

## ಎಚ್ಚರಿಕೆ !!

ಹದಿನಾರರ ಸಣ್ಣ ಪ್ರಾಯದಲ್ಲಿ
ಸೇರಿದಳು ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ
ಎಷ್ಟೊಂದು ಉಲ್ಲಾಸ ಆ ಕ್ಷಣದಲ್ಲಿ
ನಾನು ದುಡಿಯಬಲ್ಲೆನೆಂಬ ನಂಬಿಕೆಯಲ್ಲಿ
ಮೊದಲ ದಿನವೆ ಎಚ್ಚರಿಸಿಕೊಂಡಳು ಪಿ.ಎಮ್. ಕೈಯಲ್ಲಿ

ಏದುಸಿರು ಬಿಡುತ್ತಾ ನಿಂತಳು ಗೇಟಿನಲ್ಲಿ
ಬೈದನು ಸೆಕ್ಯುರಿಟಿ ಕೆಟ್ಟ ಕೋಪದಲ್ಲಿ
ನಿಲ್ಲಿಸಿದನು ಗಂಟೆಗಟ್ಟಲೆ ಗೇಟಿನಲ್ಲಿ
ಬಂದನು ಗೇಟಿಗೆ ಪಿ.ಎಮ್. ಶರವೇಗದಲ್ಲಿ
ಹಾಕಿಸಿಕೊಂಡನು ಸಹಿ ಖಾಲಿ ಕಾಗದದಲ್ಲಿ

ನಯವಾಗಿ ಕರೆದನು ಕಣ್ಣ ಸನ್ನೆಯಲ್ಲಿ
ನನ್ನ ಬಂದು ಕಾಣೆಂದು ಸಂಜೆ ಕ್ಯಾಬಿನ್ನಿನಲ್ಲಿ
ನಿಂತಳು ಏಳುವರೆಯ ಇಳಿ ಸಂಜೆಯಲ್ಲಿ
ಕೃತಜ್ಞತ ಭಾವದ ನಿಟ್ಟುಸಿರಿನಲ್ಲಿ
ಹೊರಗೆ ಬಾ ಎಂದ ನನ್ನ ಜೊತೆ ಕಾರಿನಲ್ಲಿ

ಎಷ್ಟೊಂದು ಬೇಗುದಿ ಮನಸ್ಸಿನಲ್ಲಿ
ಉಕ್ಕಿತು ರಕ್ತ ಹೃದಯ ಕವಾಟಗಳಲ್ಲಿ
ಉಗಿದಳು ಪಿ.ಎಮ್. ಮುಖಕ್ಕೆ ಕೋಪದಲ್ಲಿ
ಅಬಲೆಯಲ್ಲಾ ಶಕ್ತಿ ಇದೆ ಈ ಹೆಣ್ಣಿನಲ್ಲಿ
ಆಡಿಸದಿರು ನಿನ್ನ ಕಣ್ಣ ನೋಟದಲ್ಲಿ

ಎಷ್ಟೊಂದು ಅಬ್ಬರ ಈ ಫ್ಯಾಕ್ಟರಿಯಲ್ಲಿ
ಅಪ್ಪೆ ಗೊಬ್ಬರ ಈ ಪಿ.ಎಂ. ಮನಸ್ಸಿನಲ್ಲಿ
ಎಚ್ಚರಿಸಿದಳು ಹೆಣ್ಣು ಬೇಕಾ ಈ ವಯಸ್ಸಿನಲ್ಲಿ ?
ಈ ರೀತಿಯಾದರೆ ಮುಂದೆ ಕೊಂದುಬಿಡುವೆನಿಲ್ಲಿ !
ಕ್ಷಮೆ ಯಾಚಿಸಿದ ಪಿ.ಎಂ. ಆ ಕ್ಷಣದಲ್ಲಿ
ಮುಂದುವರಿಸಿದಳು ಕೆಲಸ ಎಚ್ಚರಿಕೆಯಲ್ಲಿ

□



## ಮುನ್ನಡೆ ನೂತನ ಪದಾಧಿಕಾರಿಗಳ ಆಯ್ಕೆ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಗೆ 2 ವರ್ಷ ತುಂಬಿದ ಹಿನ್ನೆಲೆಯಲ್ಲಿ ಬೈಲಾ ಅನ್ವಯ ಕಾರ್ಯನಿರ್ವಹಣಾ ಮಂಡಳಿಯ ಚುನಾವಣೆ ಘೋಷಿಸಲಾಗಿತ್ತು. ಕಾರ್ಮಿಕ ಪ್ರತಿನಿಧಿಗಳಾದ ರುಕ್ಮಿಣಿ, ಜಯಶ್ರೀ, ಗೀತಾ, ಭಾಗ್ಯಮ್ಮ, ಲೀಲಾವತಿ ಐರಾಣಿಯವರು ಚುನಾವಣಾ ಸಮಿತಿಯ ಸದಸ್ಯರಾಗಿದ್ದರು. ಕಾರ್ಯನಿರ್ವಹಣಾ ಮಂಡಳಿಯ ಸದಸ್ಯತ್ವಕ್ಕಾಗಿ ನಾಮಪತ್ರ ಸಲ್ಲಿಸಲು ನವೆಂಬರ್ 12ರಂದು ಕಡೆಯದಿನವಾಗಿದ್ದು, ಕಾರ್ಯನಿರ್ವಹಣಾ ಮಂಡಳಿಗೆ ಅಗತ್ಯವಿದ್ದ 20 ನಾಮಪತ್ರಗಳು ಬಂದಿದ್ದರಿಂದ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡುವ ಸಂದರ್ಭ ಒದಗಿಬಂತು. ದಿನಾಂಕ 19-11-06ರಂದು ಚುನಾವಣಾ ಸಮಿತಿ ಸಭೆ ಸೇರಿ ಮುಂದಿನ ಎರಡು ವರ್ಷ ಅವಧಿಯ ಕಾರ್ಯನಿರ್ವಹಣಾ ಮಂಡಳಿಯ ಸದಸ್ಯರನ್ನು ಸರ್ವಾನುಮತದಿಂದ ಆಯ್ಕೆಮಾಡಿ, ಪದಾಧಿಕಾರಿಗಳನ್ನು ಚುನಾಯಿಸಲಾಯಿತು.

| | | | | | |
|---|---|---|---|---|---|
| 1) | ರತ್ನಮ್ಮ | – ಅಧ್ಯಕ್ಷರು | 11) | ರತ್ನ | – ಸದಸ್ಯರು |
| 2) | ಯಮುನಾ | – ಉಪಾಧ್ಯಕ್ಷರು | 12) | ಗಿರಿಜಾ | – ಸದಸ್ಯರು |
| 3) | ಸರೋಜಾ | – ಪ್ರಧಾನ ಕಾರ್ಯದರ್ಶಿ | 13) | ಶೈಲಜಾ | – ಸದಸ್ಯರು |
| 4) | ಭಾಗ್ಯಮ್ಮ | – ಸಂಘಟನಾ ಕಾರ್ಯದರ್ಶಿ | 14) | ಪ್ರಮೀಳಾ | – ಸದಸ್ಯರು |
| 5) | ಲಲಿತಾ | – ಖಜಾಂಚಿ | 15) | ನಾರಾಯಣಮ್ಮ | – ಸದಸ್ಯರು |
| 6) | ಗಿರಿಜಾ | – ಸದಸ್ಯರು | 16) | ಸುಮ | – ಸದಸ್ಯರು |
| 7) | ರತ್ನಮ್ಮ | – ಸದಸ್ಯರು | 17) | ಅಂಬಿಕಾ | – ಸದಸ್ಯರು |
| 8) | ಶಾಂತಲಕ್ಷ್ಮಿ | – ಸದಸ್ಯರು | 18) | ಶ್ರೀಲಕ್ಷ್ಮೀ | – ಸದಸ್ಯರು |
| 9) | ಪದ್ಮಾ | – ಸದಸ್ಯರು | 19) | ಕವಿತಾ | – ಸದಸ್ಯರು |
| 10) | ಮಂಜುಳಾ | – ಸದಸ್ಯರು | 20) | ಲಲಿತಾ | – ಸದಸ್ಯರು |

### ನಿರ್ಗಮಿಸುತ್ತಿರುವ ಪದಾಧಿಕಾರಿಗಳು

| | | | | | |
|---|---|---|---|---|---|
| 1) | ರುಕ್ಮಿಣಿ ವಿ.ಪಿ. | – ಸಂಚಾಲಕರು | 11) | ಶೋಭಾ | – ಸದಸ್ಯರು |
| 2) | ಶೈಲಜಾ | – ಸಂಚಾಲಕರು | 12) | ಲಲಿತಾ | – ಸದಸ್ಯರು |
| 3) | ಪುಷ್ಪ ಎನ್.ಆರ್. | – ಸಂಚಾಲಕರು | 13) | ಸರೋಜ | – ಸದಸ್ಯರು |
| 4) | ಯಮುನಾ | – ಸದಸ್ಯರು | 14) | ದಿವ್ಯಾಮೃತ | – ಸದಸ್ಯರು |
| 5) | ಶಾರದಾ | – ಸದಸ್ಯರು | 15) | ವೇದ | – ಸದಸ್ಯರು |
| 6) | ಚಂದ್ರಕುಮಾರಿ | – ಸದಸ್ಯರು | 16) | ಸುನಂದ | – ಸದಸ್ಯರು |
| 7) | ರತ್ನಮ್ಮ | – ಸದಸ್ಯರು | 17) | ಶಾಂತಾ | – ಸದಸ್ಯರು |
| 8) | ಪಾರ್ವತಿ | – ಸದಸ್ಯರು | 18) | ರುಕ್ಮಿಣಿಬಾಯಿ | – ಸದಸ್ಯರು |
| 9) | ಸೌಭಾಗ್ಯ | – ಸದಸ್ಯರು | 19) | ನಾಗಮಣಿ | – ಸದಸ್ಯರು |
| 10) | ಗೀತಾ | – ಸದಸ್ಯರು | 20) | ಗೌರಮ್ಮ | – ಸದಸ್ಯರು |

## ಸಂವೇದನೆ....

(1ನೇ ಪುಟದಿಂದ)

ಕಾರ್ಖಾನೆಗಳಲ್ಲಿ ಮಹಿಳೆಯರು ಕಾನೂನು ಉಲ್ಲಂಘನೆಯಿಂದ, ಶೋಷಿತರಾದಾಗ, ಲೈಂಗಿಕ ಕಿರುಕುಳದಿಂದ ದೌರ್ಜನ್ಯಕ್ಕೊಳಗಾದಾಗಲೂ ಮುನ್ನಡೆ ಅತ್ಯಂತ ಬದ್ಧತೆಯಿಂದ ಅವರಿಗೆ ಆದಷ್ಟು ಮಟ್ಟಿಗೆ ನ್ಯಾಯ ಒದಗಿಸಿ ಕೊಡಲು, ಪರಿಹಾರ ಒದಗಿಸಿ ಕೊಡಲು ಶ್ರಮಿಸುತ್ತಿದೆ. ಇದರಿಂದ ಕಾರ್ಮಿಕರಿಗೆ ತಾವು ನಿಸ್ಸಹಾಯಕರಲ್ಲ, ನಮ್ಮ ಅಳಲನ್ನು ಕೇಳಲು ಒಂದು ವ್ಯವಸ್ಥೆ ಇದೆ, ಎಂಬ ಆತ್ಮವಿಶ್ವಾಸ ಮೂಡಿಸಿ ಸಂಘಟಿತರಾಗಲು ಪ್ರೋತ್ಸಾಹಿಸುವ ಉದ್ದೇಶವನ್ನು ಸಾಧಿಸುತ್ತಿದೆ.

ಒಟ್ಟಿನಲ್ಲಿ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸಲುವಾಗಿ ಹುಟ್ಟಿದ ಈ ಸಂಘಟನೆ ಅವರ ನೋವು ನಲಿವು, ಸುಖ ದುಃಖಗಳಿಗೆ ಸ್ಪಂದಿಸಬೇಕು ಅವರ ಸಮಸ್ಯೆಗಳಿಗೆ ಬೆಳವಣಿಗೆಗೆ ಸ್ವಲ್ಪವಾದರೂ ಕೊಡುಗೆ ನೀಡಬೇಕು. ಇದಕ್ಕೆ ನಿಮ್ಮೆಲ್ಲರ ಸಹಾಯ ಸಹಕಾರ ಬೇಕು

ಈ ಎರಡನೇ ವಾರ್ಷಿಕೋತ್ಸವ ನಮ್ಮ ನಿಮ್ಮೆಲ್ಲರ ಸಂಭ್ರಮದ ದಿನ, ಇದನ್ನು ಮತ್ತಷ್ಟು ಸಮೃದ್ಧಗೊಳಿಸಲು ಈ "ಸೂಜಿದಾರ" ವಿಶೇಷ ಸಂಚಿಕೆ


ಮತ್ತೊಮ್ಮೆ ಎಲ್ಲರಿಗೂ ಶುಭಾಶಯಗಳು.

# ಆತ್ಮಹತ್ಯೆ?

ದ್ಯು
ಕಿತ್ತೂ

ರೂಪಾ ಕೆಲಸದಿಂದ ಬೇಗನೆ ಮನೆಗೆ ಬಂದಳು. ಮಗು ಬಾಗಿಲಲ್ಲಿ ಕುಳಿತು ಸ್ನೇಹಿತರೊಡನೆ 'ಅವಲಕ್ಕಿ.... ಬುವ್ವಲಕ್ಕಿ.... ಕಾಂಚಿನ ಮಿಣಮಿಣ....' ಎಂದು ಆಡುತ್ತಿತ್ತು. ನೋಡಿಯೂ ನೋಡದವಳಂತೆ ಒಳಬಂದವಳೇ ಬ್ಯಾಗನ್ನು ಎಸೆದು, ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡಳು. ಅಮ್ಮನಿಗೆ ಆಶ್ಚರ್ಯ. ಎಂದೂ ಹೀಗೆ ಮಂಕಾಗಿ ಇರುವ ಹುಡುಗಿ ಇವಳಲ್ಲ. ಫ್ಯಾಕ್ಟರಿಯಿಂದ ಬಂದವಳೇ ಅಮ್ಮನೊಂದಿಗೆ ಮನೆಗೆಲಸಕ್ಕೆ ಹೋಗುವವಳು, ಇವತ್ತು ಅಮ್ಮ 'ಮನೆಕೆಲಸಕ್ಕೆ ಲೇಟಾಯ್ತು.....ಬಾರೇ..... ಎಂದು ಕೂಗುತ್ತಿದ್ದರೂ ಬಾಗಿಲು ತೆರೆಯಲೇ ಇಲ್ಲ, ಅಮ್ಮನಿಗೆ ಅಳುಕೆನ್ನಿಸಿದರೂ ಯಾರೋ ಸ್ನೇಹಿತರ ಜೊತೆ ಜಗಳವಾಡಿರಬೇಕು. ಇವಳೇ ಮಗು, ಇವಳಿಗೊಂದು ಮಗುವೇ.. ಎಂದುಕೊಂಡು ನಿಟ್ಟುಸಿರು ಬಿಡುತ್ತಾ, 'ಸರಿ, ನಾನೊಬ್ಬೇ ಹೋಗ್ತೀನಿ, ಮನೆ ಕಡೆ ನಿಗಾ ಇಡು' ಎನ್ನುತ್ತಾ ಹೊರಟರು.

ಇವಳು ಇವತ್ತಾದ ಅವಮಾನದಿಂದ ಕುಗ್ಗಿಹೋಗಿದ್ದಳು, PMಗೆ ಎದುರು ಜವಾಬು ನೀಡಿದ್ದಕ್ಕೆ ತಲೆ ಮೇಲೊಂದು



'Indiscipline person' ಎನ್ನುವ ಬೋರ್ಡನ್ನು ತೂಗುಹಾಕಿ, ಅಕ್ಕಪಕ್ಕದ ಎಲ್ಲಾ ಕಾರ್ಮಿಕರನ್ನು ಕರೆದು ಟ್ಯಾಚಿಗೇ ಕೇಳುವಂತೆ 'ನಿಮಗೂ ಇದೇ ಗತಿ' ಎಂದು ಎಚ್ಚರಿಸಿದ್ದ. ದಿನಬೆಳಗಾದರೆ ಕಾರ್ಖಾನೆಯಲ್ಲಿ ಬೈಗುಳ, ಹೀಯಾಳಿಕೆ ಇದ್ದದ್ದೇ. ಆದರೆ ಹೀಗೆ ಬೋರ್ಡು ಹಾಕಿ 'ಅಶಿಸ್ತಿನ ವ್ಯಕ್ತಿ' ಎಂದು ಗುರುತಿಸಿದ್ದು ಮಾತ್ರ ಇವಳಿಗೆ ದೊಡ್ಡ ಆಘಾತವಾಗಿತ್ತು. ಏಕೆಂದರೆ ಹೀಗೆ ನಡೆದದ್ದು ಇಡೀ ಕಾರ್ಖಾನೆಯಲ್ಲೇ ಮೊದಲನೆಯದ್ದು.

ಕುಕ್ಕರುಗಾಲಿನಲ್ಲಿ ಕೂತು ಮುಖಮುಚ್ಚಿಕೊಂಡು ಬಿಕ್ಕಳಿಸುತ್ತಿದ್ದವಳಿಗೆ ಸಾಯುವುದೇ ಮೇಲು ಎನಿಸಿತ್ತು. ಸುತ್ತ ಕಣ್ಣಾಡಿಸಿದಳು. ರೂಮಿನ ಬಾಗಿಲು ಜಡಿದಿತ್ತು. ಎದೆಯ ಮೇಲಿದ್ದ ಸುತ್ತಿ ನಿಧಾನವಾಗಿ ಜೀರತೊಡಗಿದಳು. ಬಗಿಯಾಗುತ್ತಿದ್ದಂತೆ ಕಣ್ಣು ಕತ್ತಲಾಯಿತು..... ಮುಂದೆ?

ರಾತ್ರಿ, ಮನೆಗೆಲಸ ಮುಗಿಸಿ ಮಗಳು ಬೇಜಾರು ಮಾಡಿಕೊಂಡಿದ್ದಾಳೆ. ಅವಳಿಗಿಷ್ಟವಾದ ಕಡಲೇಬೇಳೆ ಪಾಯಸ ಮಾಡಿಕೊಡೋಣ ಎಂದುಕೊಂಡು ಮನೆಗೆ ಬಂದ ತಾಯಿ ನೋಡುತ್ತಾಳೆ ! ರೂಮಿನ ಬಾಗಿಲು ಇನ್ನೂ ತೆರೆದಿಲ್ಲ. ದಿಗಿಲಾಗಿ ಬಾಗಿಲು ಬಡಿಯತೊಡಗಿದಳು. ಅಕ್ಕಪಕ್ಕದವರನ್ನು ಸಹಾಯಕ್ಕೆ ಕರೆದರು. "ರೂಪಾ ರೂಪಾ....." ಏನೇ ಗದ್ದಲವಾದರೂ ಒಳಗಿನಿಂದ ಪ್ರತಿಕ್ರಿಯೆ ಬರಲಿಲ್ಲ. ಬಾಗಿಲು ಒಡೆದು ಒಳಹೊಕ್ಕಾಗ ರೂಪಾ ಕಂಡದ್ದು ಹೆಣವಾಗಿ!

ತಾಯಿ 'ರೂಪಾ......!' ಎನ್ನುತ್ತಾ ಕುಸಿದರು. ಮೇಲೇಳಲೇ ಇಲ್ಲ. ಉಸಿರು ನಿಂತಿತ್ತು. ಎಲ್ಲವನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದ ಕೂಸು 'ಅಮ್ಮಾ.... ಎಂದು ಅಳತೊಡಗಿತ್ತು. ಗಂಡನ ಕಿರುಕುಳ ತಾಳಲಾಗದೆ ರೂಪಾ ತನ್ನ ತಾಯಿ, ಮಗುವಿನೊಂದಿಗೆ ಬದುಕುತ್ತಿದ್ದಳು. ಮಗು ಇನ್ನು ಒಬ್ಬೊಂಟಿ. ದಿಕ್ಕಿಲ್ಲದ ಕೂಸನ್ನು ಕಂಡು ನೆರೆದ ಜನ ಮರುಗುತ್ತಿದ್ದರು. ಹೃದಯ ಹಿಂಡುವಂತಿತ್ತು ಆ ದೃಶ್ಯ.

'ಇಲ್ಲಾ.....' ಬೆಚ್ಚಿ ಕಣ್ಣು ತೆರೆದಳು. ಹಾಕಿದ ಬಾಗಿಲು ಹಾಗೇ ಇತ್ತು. ತಾನು ಸತ್ತಿರಲಿಲ್ಲ. ಹಾಗೊಂದು ಕನಸು ಮೈಬೆವರಿಳಿಸಿತ್ತು. 'ನಾನು ಸಾಯಬಾರದು! ಸಾಯಲಾರೆ! ಹೌದು ನಾನು ಸತ್ತರೆ ತಾಯಿಯೂ ಉಳಿಯುವುದಿಲ್ಲ. ಮಗು ಅನಾಥವಾಗುತ್ತದೆ! ಯಾವನೋ ಒಬ್ಬ ತನ್ನನ್ನು ಹೀಯಾಳಿಸಿದ್ದಕ್ಕೆ ನಾನು ಸಾಯಲಾರೆ! ದುಡಿಮೆ ನನ್ನ ಕೈಲಿದೆ. ತಾಯಿ-ಮಗುವನ್ನು ಸಾಕುವ ಜವಾಬ್ದಾರಿ ಹೆಗಲಮೇಲಿದೆ. ನೂರಾರು ಅಸಹಾಯಕ ಹೆಣ್ಣುಮಕ್ಕಳನ್ನು ಕೇವಲ ಲಾಭದ ಆಸೆಗಾಗಿ ಮಾನಸಿಕವಾಗಿ – ದೈಹಿಕವಾಗಿ ಹಿಂಸಿಸುವವರ ವಿರುದ್ಧ ಸಟೆದು ನಿಲ್ಲಬೇಕು. ನ್ಯಾಯಕ್ಕಾಗಿ ಹೋರಾಡಬೇಕು. ನಮ್ಮ ದುಡಿಮೆಯಿಂದಲೇ ಅವನು ಬದುಕುತ್ತಿರುವುದು. ಕಾರ್ಮಿಕರನ್ನು ಗೌರವಿಸುವ ಪರಿಪಾಠಕ್ಕೆ ನಾಂದಿ ಹಾಡಬೇಕು. ನಮಗೂ ಗೌರವದ ಬದುಕು ಬೇಕು' ಎಂದುಕೊಳ್ಳುತ್ತಾ ಸರಸರನೆ ಮೇಲೆದ್ದು, ಮಗುವ ಕಾಣಲು ಹೊರಬಂದಳು. ಮಗು ಇನ್ನೂ ಆಟದಲ್ಲಿ ತಲ್ಲೀನವಾಗಿತ್ತು.

'ಅವಲಕ್ಕಿ..... ಬುವ್ವಲಕ್ಕಿ..... ಕಾಂಚಿನ ಮಿಣ ಮಿಣ.....' ☐

# ಯುವ ತಂಡ



'ಯುವತಂಡ' ಗಾರ್ಮೆಂಟ್ಸ್‌ಗಳಲ್ಲಿ ದುಡಿವ ಯುವ ಮಹಿಳಾ ಕಾರ್ಮಿಕರ ಒಂದು ಗುಂಪು. ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಾ ತಮ್ಮೊಳಗಿನ ಸುಪ್ತ ಪ್ರತಿಭೆಯನ್ನು ಹೊರಹಾಕದೆ ಇದ್ದವರ ಗುಂಪು. ಆದರೀಗ ಈ ಮಾತು ಅದಕ್ಕೆ ಅಪವಾದ. ನಾವು ಊಹಿಸಲಾರದಷ್ಟು ಪ್ರತಿಭೆಯ ಗಣಿ ಈ ಯುವತಿಯರು. ಅಗೆದಷ್ಟೂ ಸಿಗುವ ಪ್ರತಿಭೆ.

ಜೀವನದ ಅನೇಕ ಒತ್ತಡ, ತೊಳಲಾಟ, ಜವಾಬ್ದಾರಿ, ಅನಾರೋಗ್ಯ ಹೀಗೆ ಹತ್ತಾರು ಜಂಜಾಟಗಳ ನಡುವೆಯೂ ಸುಮಾರು 18–25ರ ನಡುವಿನ ಯುವತಿಯರ 4 ತಂಡ ಈವರೆಗೆ ರಚಿತವಾಗಿದೆ.

ಪ್ರತಿದಿನವೂ O.T., O.C ಆದರೂ ಸಂಜೆ 7 ಗಂಟೆಯ ನಂತರ ಆಫೀಸಿಗೆ ಬಂದು 9.00 ಗಂಟೆಯವರೆಗೂ ಬೆಳಗ್ಗೆಯಿಂದ ದುಡಿದ ದುವನ್ನು ಮರೆತು ಇವರು ನಾಟಕದಲ್ಲಿ ತಲ್ಲೀನರಾಗುತ್ತಿದ್ದರು. ವಾರಕ್ಕೊಂದು ರಜೆ ಭಾನುವಾರ. ಆದರೆ ಅಂದೂ ಕೂಡಾ ಎಂದಿನಂತೆ 10.00 ಗಂಟೆಗೆ ತಾಲೀಮಿಗೆ ರೆಡಿ. ಇವರ ಬದ್ಧತೆ, ಆಸಕ್ತಿಗೆ ಎಷ್ಟು ಹೇಳಿದರೂ ಕಡಿಮೆ.



ಯುವತಂಡದ ಮೊದಲ ಪ್ರದರ್ಶನ 'ದುಡಿಮೆಯ ಬದುಕು' ನಡೆದದ್ದು 2004ರ ಸೆಪ್ಟೆಂಬರ್‌ನಲ್ಲಿ A.D.A ರಂಗಮಂದಿರದಲ್ಲಿ ನಡೆದ 'ಕಾರ್ಮಿಕ ವಿನಿಮಯ' ಕಾರ್ಯಕ್ರಮದಲ್ಲಿ. ಅದಾದನಂತರ ನೇಕ ವೇದಿಕೆಗಳಲ್ಲಿ ತರಬೇತಿ ಕಾರ್ಯಕ್ರಮಗಳಲ್ಲಿ, ಚಾರಗೋಷ್ಠಿಗಳಲ್ಲಿ ನಾಟಕ ಪ್ರದರ್ಶನವಾಯಿತು.

ನಂತರ 2005ರ ಮಾರ್ಚ್ 6ರಂದು 'ಮುನ್ನಡೆ' ಆಚರಿಸಿದ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ 'ನಾವು ಬೆವರನು ಸುರಿಸಿ ದುಡಿಯುವ ಜನ' ನಾಟಕ ಪ್ರದರ್ಶನವಾಯಿತು. ಇದು ಯುವತಂಡ ಎರಡನೇ ಗುಂಪು ಪ್ರದರ್ಶಿಸಿದ ನಾಟಕ.

ಈ ತಂಡದಲ್ಲಿದ್ದ ಹಲವರು ಮದುವೆಯಾದರು, ಇನ್ನೂ ಕೆಲವರು ದೂರದ ಕಾರ್ಖಾನೆಗೆ ಸೇರಿಕೊಂಡರು, ಮನೆ ಬದಲಿಸಿದರು – ಹೀಗೆ ಈ ತಂಡ ಹೋಗಿ ಹೊಸ ತಂಡ ಹುಟ್ಟಿಕೊಂಡಿತು.

3ನೇ ತಂಡಕ್ಕೆ ದು. ಸರಸ್ವತಿಯವರು ನಾಟಕ ಕಲಿಸುವ ಹೊಣೆ ಹೊತ್ತರು. ಸುಮಾರು 6–7 ತಿಂಗಳಿನಿಂದ ತರಬೇತಿ ಶುರುವಾಯಿತು. ಪ್ರತಿವಾರವು ಹೊಸಬರ ಆಗಮನ, ಹಳಬರ ನಿರ್ಗಮನ ಸಾಮಾನ್ಯವಾಗಿ ಹೋಯ್ತು. ಗಟ್ಟಿಯಾದ ತಂಡವೊಂದು ರೂಪುಗೊಳ್ಳಲೇ ಇಲ್ಲ. ತಂಡ ರೂಪುಗೊಳ್ಳದೆ ನಾಟಕ ತಾಲೀಮು ನಡೆಸುವುದು ಸಾಧ್ಯವೇ ಇರಲಿಲ್ಲ. ಹಾಗಾಗಿ ಪ್ರತಿವಾರ ಯೋಗಾಸನ, ಕರಾಟೆ, ಹಾಡುಗಳು, ಆಟ, ಆರೋಗ್ಯ ತರಬೇತಿ ಹೀಗೆ ಮುಂದುವರೆಯಿತು.



20 ಜನರ ಒಂದು ತಂಡಕ್ಕೆ ವಸತಿ ಶಿಬಿರ ನಡೆಸುವ ಯೋಜನೆಯೂ ವಿಫಲವಾಯಿತು. ಕಡೆಗೆ 10 ಯುವತಿಯರು 3 ದಿನದ ಶಿಬಿರದಲ್ಲಿ ಪಾಲ್ಗೊಳ್ಳುವ ಮೂಲಕ ತಂಡವೊಂದು ರಚನೆಯಾಯಿತು.

ನಾಟಕದ ತಾಲೀಮು ಪ್ರಾರಂಭವಾಯಿತು. ನಾಟಕದ ಹೆಸರು 'ಸೂಜಿ–ದಾರ' ರಚನೆ ನಿರ್ದೇಶನದ ಹೊಣೆ ದು. ಸರಸ್ವತಿಯವರದು.

ಯುವತಂಡದ ಒಂದು ಮೇಜರ್ ಪ್ರೊಡಕ್ಷನ್ ಈ ನಾಟಕ.

ಇದರ ಪ್ರದರ್ಶನ ಮುನ್ನಡೆಯ ಎರಡನೇ ವಾರ್ಷಿಕೋತ್ಸವದಲ್ಲಿ ನಡೆಯಲಿದೆ.

ಯುವತಂಡ ಈವರೆಗೆ ಅನೇಕ ವೇದಿಕೆಯಲ್ಲಿ ತನ್ನ ಕಾರ್ಯಕ್ರಮ ನೀಡಿದೆ. ಹತ್ತು–ಹಲವು ಸಂಘಟನೆಗಳಲ್ಲಿ 'ಮುನ್ನಡೆ ಯುವತಂಡ' ಎಂದೇ ಗುರುತಿಸಿಕೊಂಡಿದೆ.

ಇದರ ಯಶಸ್ಸಿಗೆ ಶ್ರಮಿಸಿದ ಪ್ರತಿಯೊಬ್ಬರನ್ನೂ ಯುವ ತಂಡ ನೆನೆಯುತ್ತದೆ.

# ಮುನ್ನಡೆ ಸಲಹಾ ಮಂಡಳಿ

## ಪ್ರೊ|| ಹಸನ್ ಮನ್ಸೂರ್

ಇವರು ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ ರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಪಿ.ಯು.ಸಿ.ಎಲ್.ನ ಕರ್ನಾಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಹೇಮಲತಾ ಮಹಿಷಿ

ಕರ್ನಾಟಕದ ಹೆಸರಾಂತ ವಕೀಲರಾದ ಇವರು ಸಹ ಮಹಿಳಾ ಪರ ಚಿಂತಕರು. ಕಾನೂನಿನಲ್ಲಿ ಮಹಿಳೆಗೆ ಇರುವ ಸ್ಥಾನ, ಅವಳ ಹಕ್ಕುಗಳ ಬಗ್ಗೆ ಹಲವಾರು ಲೇಖನಗಳನ್ನೂ ಸಹ ಬರೆದು ಪ್ರಕಟಿಸಿದ್ದಾರೆ.

## ಡಾ|| ವಿಜಯಾ

ಸಾಹಿತ್ಯ ಕ್ಷೇತ್ರ ಹಾಗೂ ಪತ್ರಿಕೋದ್ಯಮದಲ್ಲಿ ಅಪಾರ ಸೇವೆ ಸಲ್ಲಿಸಿರುವ ಇವರು ನಮ್ಮ ನಾಡಿನ ಹೆಸರಾಂತ ಮಹಿಳಾ ಪರ ಚಿಂತಕರು. ತಾವು ಸಲ್ಲಿಸಿದ ಸೇವೆಗೆ ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಇವರು, ಚಿತ್ರೋದ್ಯಮದಲ್ಲಿ ನೀಡುವ ಅನೇಕ ಪ್ರಶಸ್ತಿ ಪ್ರದಾನ ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ.

## ಡೋನಾ ಫರ್ನಾಂಡೀಸ್

ಮಹಿಳಾ ಚಳವಳಿ ಎಂದೊಡನೆ ಪ್ರಮುಖವಾಗಿ ನೆನಪಾಗುವ ವಿಮೋಚನಾ ಸಂಸ್ಥೆಯ ರೂವಾರಿಗಳಾದ ಇವರು ಸಮಾಜ ಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿದ್ದಾರೆ. ಮಹಿಳೆಗೆ ಯಾವ ರೀತಿಯಲ್ಲಿ ಅನ್ಯಾಯವಾದರೂ ಸಹ ಅವರನ್ನು ಬೆಂಬಲಿಸಿ ಅವರ ಪರ ಹೋರಾಡುವ, ಇವರು ಪ್ರಸ್ತುತ ವಿಮೋಚನಾ ಸಂಸ್ಥೆಯಲ್ಲಿದ್ದಾರೆ.

## ಗೀತಾ ಮೆನನ್

ಸಾಮಾಜಿಕ ಕಳಕಳಿಯಿಂದ ಸಮಾಜ ಸೇವೆ ಮಾಡುತ್ತಿರುವ ಇವರು, ಪ್ರಸ್ತುತ ಸ್ತ್ರೀ ಜಾಗೃತಿ ಸಮಿತಿ ಎಂಬ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಮನೆಗೆಲಸ ಮಾಡುವ ಹೆಣ್ಣುಮಕ್ಕಳನ್ನು ಸಂಘಟಿಸಿದ್ದಾರೆ. ಎಲ್ಲಿಯಾದರೂ ಸರಿ ಹೆಣ್ಣುಮಕ್ಕಳಿಗೆ ಅನ್ಯಾಯವಾದರೆ ಖುದ್ದಾಗಿ ಭಾಗವಹಿಸಿ ನ್ಯಾಯಕ್ಕಾಗಿ ಹೋರಾಡುವ ಇವರು ಅಪಾರ ಸ್ತ್ರೀ ಪರ ಕಾಳಜಿ ಹೊಂದಿದ್ದಾರೆ.

## ಎ.ಜೆ. ಶ್ರೀನಿವಾಸನ್

ಹೆಸರಾಂತ ವಕೀಲರಾದ ಇವರು ಕಾರ್ಮಿಕ ಪರ ನಿಲುವುಳ್ಳವರು. ಕಾರ್ಮಿಕ ಕಾನೂನುಗಳು ಸಮರ್ಪಕವಾಗಿ ಜಾರಿಗೆ ಬರಬೇಕೆಂಬ ಕಳಕಳಿಯುಳ್ಳ ಇವರು ನ್ಯಾಯಾಲಯದಲ್ಲಿ ಕಾರ್ಮಿಕರ ಪರ ವಾದಿಸಿ, ಅವರಿಗೆ ಸಾಧ್ಯವಾದಷ್ಟೂ ಮಟ್ಟಿಗೆ ನ್ಯಾಯ ಒದಗಿಸಿಕೊಡುತ್ತಿದ್ದಾರೆ.

## ಮಂಜುನಾಥ ಅದ್ದೆ

ರಾಜ್ಯದ ಪ್ರಮುಖ ವಾರಪತ್ರಿಕೆಯಾದ "ಅಗ್ನಿ"ಯಲ್ಲಿ ಪ್ರಮುಖ ವರದಿಗಾರರಾಗಿ ಕೆಲಸ ಮಾಡುತ್ತಿರುವ ಶ್ರೀ ಮಂಜುನಾಥ ಅದ್ದೆಯವರು ಸಾಮಾಜಿಕ ಬದಲಾವಣೆಗಾಗಿ ಶ್ರಮಿಸುತ್ತಿರುವವರು. ವಿದ್ಯಾರ್ಥಿ ಜೀವನದಿಂದಲೂ ಅನೇಕ ಚಳವಳಿಗಳಲ್ಲಿ ಭಾಗವಹಿಸಿ ದಲಿತರು ಹಾಗೂ ಬಡವರ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಹೆಣ್ಣುಭ್ರೂಣ ಹತ್ಯೆಯ ಬಗ್ಗೆ ಸಮೀಕ್ಷಾ ವರದಿಯೊಂದನ್ನು ಸಿದ್ಧಪಡಿಸಿದ್ದಾರೆ.

## ದ್ವಾರತಿಬ್ಯಾರೆಟೋ

ಇವರು ಸುಮಾರು 20 ವರ್ಷಗಳ ಕಾಲ ಇಂಡಿಯನ್ ಸೋಷಿಯಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡಿದವರು. ದೆಹಲಿಯ ಸಿ.ಇ.ಸಿ. ಸಂಸ್ಥೆ, ಶಿಶುಮಂದಿರಗಳಲ್ಲಿ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹಿರಿಯ ನಾಗರಿಕರಿಗಾಗಿ, ಕೊಳಚೆ ಪ್ರದೇಶದಲ್ಲಿ ವಾಸಿಸುವಂತಹ ಜನರಿಗಾಗಿ ಹಾಗೂ ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಕೆಲಸ ಮಾಡುತ್ತಿರುವ ಫೆಡಿನಾ ಸಂಸ್ಥೆಯ ಮುಖ್ಯ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

## ಸೆಬಾಸ್ಟಿಯನ್ ದೇವರಾಜ್

ಇವರು ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಅಧೀನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿ, ಪ್ರಸ್ತುತ ಫೆಡಿನಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಗೋಪಿನಾಥ್

ವಿದ್ಯಾರ್ಥಿ ಚಳವಳಿಯ ಹಿನ್ನೆಲೆಯಿಂದ ಬಂದವರಾದ ಇವರು ಕೆಳಮಟ್ಟದಲ್ಲಿ ಜನರ ಪರ ಕೆಲಸ ಮಾಡುವುದರಿಂದ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ ಎಂದು ನಂಬಿದವರು. ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರ ಪರವಾಗಿ, ಹಾಗೂ ತುಳಿತಕ್ಕೊಳಗಾದವರ ಪರವಾಗಿ ಅನೇಕ ಕೆಲಸ ಮಾಡಿದ್ದಾರೆ. ಪ್ರಸ್ತುತ ಇವರು ಸಿವಿಡೆಪ್ ಸಂಸ್ಥೆಯ ಕಾರ್ಯದರ್ಶಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. □



Scanned with OKEN Scanner

- ಉದ್ಯೋಗದಲ್ಲಿರುವ ಮಹಿಳೆಯರಿಗೆ ಅವರು ಕೆಲಸ ಮಾಡುವ ಸ್ಥಳಗಳಲ್ಲಿ, ಜೊತೆಯಲ್ಲಿ ಕೆಲಸ ಮಾಡುವ ಪುರುಷ ಸಹೋದ್ಯೋಗಿಗಳಿಂದ, ಅಲ್ಲಿಗೆ ಬರುವ ಮೂರನೆಯ ವ್ಯಕ್ತಿಗಳಿಂದ ಕೆಲವೊಮ್ಮೆ ಲೈಂಗಿಕ ಕಿರುಕುಳವಾಗುತ್ತದೆ. ಅದಕ್ಕೆ ಏನಾದರು ಪರಿಹಾರವಿದೆಯೇ?

○ ಇತ್ತೀಚೆಗೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕಚೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂತಹ ಕಡೆಗೆ ಪುರುಷ ಮೇಲಾಧಿಕಾರಿಗಳಿಂದ, ಸಹೋದ್ಯೋಗಿಗಳಿಂದ ಅವಳು ಹೆಣ್ಣು ಎನ್ನುವ ಕಾರಣದಿಂದಾಗಿ ಲೈಂಗಿಕ ಕಿರುಕುಳಗಳೂ ಆಗುತ್ತದೆ. ಕೆಲವೊಮ್ಮೆ ಹೊರಗಿನ ವ್ಯಕ್ತಿಗಳು ಅವರೊಂದಿಗೆ ಅಸಭ್ಯವಾಗಿ ನಡೆದುಕೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಈವರೆಗೆ ಮಹಿಳಾ ಉದ್ಯೋಗಿಗೆ ಇದ್ದ ದಾರಿ ಎಂದರೆ ಪೊಲೀಸರಿಗೆ ದೂರು ಕೊಡುವುದು. ಅವರು ಕ್ರಿಮಿನಲ್ ಮೊಕದ್ದಮೆ ಹೂಡುವುದು. ಆದರೆ ಇದರಿಂದ ತಮ್ಮ ಕೆಲಸಕ್ಕೆ, ಗೌರವಕ್ಕೆ ಧಕ್ಕೆಯಾಗುತ್ತದೆ ಎಂದು ಹೆದರಿ ಸುಮ್ಮನಿರುತ್ತಿದ್ದರು. ಇಂತಹ ಪ್ರಕರಣ ನಡೆದಾಗ ಸರ್ವೋಚ್ಚ ನ್ಯಾಯಾಲಯದ ಮುಂದೆ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಹಾಕಲಾಗಿತ್ತು. ಇದರ ಆಧಾರದ ಮೇರೆಗೆ ನ್ಯಾಯಾಲಯ ಉದ್ಯೋಗಸ್ಥ ಮಹಿಳೆಯರ ರಕ್ಷಣೆಗಾಗಿ ಕೆಲವೊಂದು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದೆ. ಬೇರೆ ಕಾನೂನು ಮಾಡುವವರೆಗೆ ಆ ಸೂತ್ರಗಳೇ ಕಾನೂನಾಗಿರುತ್ತದೆ ಎಂದು ಘೋಷಿಸಿದೆ.

○ ಇದಕ್ಕೆಂದೇ ಸರ್ವೋಚ್ಚ ನ್ಯಾಯಾಲಯ ಹೊಸದಾಗಿ ಒಂದು ಬದಲಿ ವ್ಯವಸ್ಥೆಯನ್ನು ರೂಪಿಸಿದೆ. ಪ್ರತಿ ಕೆಲಸದ ಸ್ಥಳಗಳಲ್ಲಿ ಸೂಕ್ತ ದೂರು ವ್ಯವಸ್ಥೆಯನ್ನು ರಚಿಸಬೇಕು ಮತ್ತು ದೂರನ್ನು ನಿರ್ದಿಷ್ಟ ಸಮಯದೊಳಗಾಗಿ ವಿಚಾರಣೆ ಮಾಡಿ ಪರಿಹಾರ ಒದಗಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ. ಅಪರಾಧವು ಕಾನೂನಿನ ಅಡಿಯಲ್ಲಿ ಬರದಿದ್ದರೂ ದೂರು ವ್ಯವಸ್ಥೆ ಪರಿಹಾರ ನೀಡಬಹುದು.

- ಈ ದೂರು ವ್ಯವಸ್ಥೆ ಎಂದರೆ ಏನು? ಅದರಲ್ಲಿ ಯಾರು ಇರುತ್ತಾರೆ?

○ ಈ ವ್ಯವಸ್ಥೆಯಲ್ಲಿ ಒಂದು "ದೂರು ಸಮಿತಿ" ಇರುತ್ತದೆ. ಈ ಸಮಿತಿಯ ಅಧ್ಯಕ್ಷರು ಒಬ್ಬ ಮಹಿಳೆಯಾಗಿರಬೇಕು ಹಾಗೂ ಒಟ್ಟು ಸದಸ್ಯರ ಕನಿಷ್ಠ ಅರ್ಧದಷ್ಟು ಭಾಗವಾದರೂ ಮಹಿಳೆಯರಾಗಿರಬೇಕು. ಇಲ್ಲಿ ನಡೆಯುವ ವಿಷಯವನ್ನು ಗೌಪ್ಯವಾಗಿಡಬೇಕಾಗುತ್ತದೆ.

- ಸಮಿತಿಯ ಸದಸ್ಯರೆಲ್ಲರೂ ಅಲ್ಲಿನ ಕೆಲಸಗಾರರೇ ಆದರೆ, ಮೇಲಾಧಿಕಾರಿಗಳು ಅವರ ಮೇಲೆ ಒತ್ತಡ ತರಲು ಪ್ರಭಾವ ಬೀರಲು ಯತ್ನಿಸಬಹುದಲ್ಲವೆ?

○ ಹೌದು, ಈ ಕಾರಣದಿಂದಾಗಿಯೇ ಈ ದೂರು ಸಮಿತಿಯಲ್ಲಿ ಒಬ್ಬ ಹೊರಗಿನ ಸದಸ್ಯರು ಇರಬೇಕೆಂದು ನ್ಯಾಯಾಲಯ ತಿಳಿಸಿದೆ. ಆ ಸದಸ್ಯರು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಯಾಗಿರಬಹುದು ಅಥವಾ ಲೈಂಗಿಕ ಕಿರುಕುಳದ ವಿಷಯದಲ್ಲಿ ತಿಳುವಳಿಕೆ ಹೊಂದಿದವರಾಗಿರಬಹುದು.



# ಲೈಂಗಿಕ ಕಿರುಕುಳ : ಕಾನೂನಿನ ದೃಷ್ಟಿಯಲ್ಲಿ...

*ಮಹಿಳೆಯರು ಅದರಲ್ಲೂ ದುಡಿಯುವ ಮಹಿಳೆಯರು ತಮ್ಮ ಜೀವನದಲ್ಲಿ ಹಲವಾರು ರೀತಿಯ ಹಿಂಸೆಗಳನ್ನು ಸಹಿಸುತ್ತಿದ್ದಾರೆ. ಅವರ ಅತೀ ಸಾಮಾನ್ಯವಾದ ಅನುಭವ ಎಂದರೆ ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳ. ಇದಕ್ಕೆ ಏನು ಪರಿಹಾರ? ಕಾನೂನಿನ ಅಡಿಯಲ್ಲಿ ಇದಕ್ಕೆ ಯಾವುದೇ ಪರಿಹಾರವಿಲ್ಲವೇ? ಈ ಕುರಿತು ಕೆಲವು ಪ್ರಶ್ನೆಗಳಿಗೆ ನಾಡಿನ ಖ್ಯಾತ ವಕೀಲರಾದ ಶ್ರೀಮತಿ ಹೇಮಲತಾ ಮಹಿಷಿಯವರು ಉತ್ತರಿಸಿದ್ದಾರೆ.*

- ಯಾವ ಯಾವ ಕೃತ್ಯಗಳೂ ಈ ಸೂತ್ರಗಳ ಪ್ರಕಾರ ಲೈಂಗಿಕ ಕಿರುಕುಳವಾಗುತ್ತದೆ?

○ ಮಹಿಳೆ ಬಯಸದೆ ದೈಹಿಕ ಸಂಪರ್ಕ ಮತ್ತು ನಡವಳಿಕೆ; ಲೈಂಗಿಕ ಒಲವು ತೋರಿಸಲು ಒತ್ತಾಯ ಅಥವಾ ಬೇಡಿಕೆ: ಲೈಂಗಿಕ ಛಾಯೆಯ ಟೀಕೆಗಳು: ಅಶ್ಲೀಲ ವಿಷಯ-ವಸ್ತು ತೋರಿಸುವುದು: ಮತ್ತಾವುದೇ ರೀತಿಯ, ದೈಹಿಕ, ಮಾತಿನ ಮಾತಿನದಲ್ಲದ ಲೈಂಗಿಕ ರೀತಿಯ ನಡವಳಿಕೆ ಇವುಗಳು ಲೈಂಗಿಕ ಕಿರುಕುಳ ಎನಿಸಿಕೊಳ್ಳುತ್ತದೆ.

- ಈ ರೀತಿಯ ಲೈಂಗಿಕ ಕಿರುಕುಳದ ಕೃತ್ಯ ನಡೆದಾಗ ತಪ್ಪಿತಸ್ಥರ ವಿರುದ್ಧ ಯಾರು ಕ್ರಮ ಕೈಗೊಳ್ಳಬೇಕು?

○ ಮಾಲೀಕರು ಅಥವಾ ಆ ಕೆಲಸದ ಸ್ಥಳದ ಮೇಲ್ವಿಚಾರಣೆಯಲ್ಲಿರುವವರು ತಮ್ಮ ಉದ್ಯೋಗ ಸ್ಥಳಗಳಲ್ಲಿ ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ಕಿರುಕುಳವಾಗದಂತೆ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕಾನೂನು ವಿಧಿಸುತ್ತದೆ. ಅದು ಅವರ ಜವಾಬ್ದಾರಿ.

- ತಪ್ಪಿತಸ್ಥರ ವಿರುದ್ಧ ಮಾಲೀಕರು ತೆಗೆದುಕೊಳ್ಳುವ ಕ್ರಮಗಳು ಅನೇಕ ವಿಧಿ ವಿಧಾನಗಳನ್ನು ಒಳಗೊಂಡಿರುವುದರಿಂದ ಹೆಚ್ಚಿನ ಸಮಯ ವ್ಯರ್ಥವಾಗುವುದರಿಂದ ಮಹಿಳೆಗೆ ಶೀಘ್ರವಾಗಿ ನ್ಯಾಯ ಒದಗಿಸುವ ಬೇರೆ ಯಾವುದೇ ವ್ಯವಸ್ಥೆ ಇಲ್ಲವೆ?

- ಈ ಸಮಿತಿಯು ತಾನು ನಿರ್ವಹಿಸಿದ ಕೆಲಸದ ಬಗೆಗೆ ಯಾರಿಗೆ ನೇರವಾಗಿ ಜವಾಬ್ದಾರವಾಗಿರುತ್ತದೆ?

○ ಸಮಿತಿಯು ಪ್ರತಿವರ್ಷ ಸಂಬಂಧಪಟ್ಟ ಸರ್ಕಾರಿ ಇಲಾಖೆಗೆ, ತನಗೆ ಬಂದ ದೂರು, ಅದರ ಮೇಲೆ ತಾನು ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಬೇಕು. ಅದೇ ರೀತಿ, ಮಾಲೀಕರು ಸಮಿತಿಯ ವರದಿಯ ಮೇಲೆ ಹಾಗೂ ನ್ಯಾಯಾಲಯದ ಮಾರ್ಗದರ್ಶಿ ಸೂತ್ರಗಳ ತಾವು ತೆಗೆದುಕೊಂಡ ಕ್ರಮಗಳ ಬಗ್ಗೆ ಸರ್ಕಾರಿ ಇಲಾಖೆಗೆ ವರದಿ ಸಲ್ಲಿಸಬೇಕು.

- ಈ ವಿಷಯದಲ್ಲಿ ಅಲ್ಲಿಯ ಕಾರ್ಮಿಕರ ಕೆಲಸಗಾರರ ಪಾತ್ರವೇನೂ ಇಲ್ಲವೆ?

○ ಕಾರ್ಮಿಕರ ಸಭೆಗಳಲ್ಲಿ ಮತ್ತಿತರ ವೇದಿಕೆಗಳಲ್ಲಿ ಲೈಂಗಿಕ ಕಿರುಕುಳದ ವಿಷಯವನ್ನು ಎತ್ತಲು, ಚರ್ಚಿಸಲು ಅವಕಾಶವಿದೆ.

- ಈ ಮಾರ್ಗದರ್ಶಿ ಸೂತ್ರಗಳು ಎಲ್ಲ ಕಡೆ ಪರಿಪಾಲನೆಯಾಗುತ್ತಿದೆಯೇ?

○ 1997ರಲ್ಲಿ ಈ ಸೂತ್ರಗಳು ಜಾರಿಗೆ ಬಂದಿದ್ದರೂ ಇನ್ನೂ ಸರ್ಕಾರಿ, ಸಾರ್ವಜನಿಕ, ಖಾಸಗಿ ಕ್ಷೇತ್ರಗಳಲ್ಲಿ ಪರಿಪೂರ್ಣವಾಗಿ ಜಾರಿಗೆ ಬಂದಿಲ್ಲ. ಈ ರೀತಿ ಆಗದ ಹೊರತು ಪರಿಣಾಮಕಾರಿಯಾಗಿ ನ್ಯಾಯ ಒದಗಿಸಲು ಸಾಧ್ಯವಿಲ್ಲ.

❑



Scanned with OKEN Scanner

# ಛಲ



ಬೆಳಗಿನ ಚುಮು ಚುಮು ಚಳಿಯಲ್ಲಿ ರಂಗಣ್ಣ ಎದ್ದು ಹಸುಗಳನ್ನು ಹೊರಗೆ ಕಟ್ಟಿ ಕೊಟ್ಟಿಗೆಯನ್ನು ಗುಡಿಸಿಬಂದು ಹೊಲಕ್ಕೆ ಹೋಗುವ ಮೊದಲು ಮಕ್ಕಳನ್ನು ಎಚ್ಚರಿಸಿ ಅಡುಗೆ ಮಾಡಲು ನಿಂತನು. ಸುಮಾರು ಎರಡು ವರ್ಷಗಳಿಂದ ಈ ಕಾಯಕ ಅವನ ಹೆಗಲ ಮೇಲೆ ಬಿದ್ದಿತ್ತು. ಹೆಂಡತಿಯ ಕ್ಯಾನ್ಸರ್ ಕಾಯಿಲೆಗೆ ಮಾಡಿದ ಲಕ್ಷಾಂತರ ರೂಪಾಯಿ ಸಾಲ ಮೈಮೇಲಿತ್ತು. ಆಸ್ತಿಯೆಲ್ಲವನ್ನೂ ಮಾರಿ, ಕಡೆಗೆ ಜೀವನೋಪಾಯಕ್ಕಾಗಿ ಉಳಿದಿದ್ದೊಂದು ತೋಟ. ಆದರೂ ಸಾಲ ತೀರಲಿಲ್ಲ. ಜೊತೆಗೆ ಮೂವರು ಹೆಣ್ಣು ಮಕ್ಕಳು.

ಮಕ್ಕಳನ್ನು ಚೆನ್ನಾಗಿ ಓದಿಸಬೇಕೆಂದು ರಂಗಣ್ಣನ ಬಹು ದೊಡ್ಡ ಕನಸು. ಆದರೆ ಅದು ಸಾಧ್ಯವಾಗುವುದಾದರೂ ಹೇಗೆ ಸಾಧ್ಯ? ತಾಯಿಯಿಲ್ಲದ ಹೆಣ್ಣುಮಕ್ಕಳ ಮೇಲೆ ಮನೆಗೆಲಸ ಹೊರೆ. ಹಿರಿಯಳಾದ ರೂಪ ಈ ವರ್ಷ 10ನೇ ತರಗತಿಯಲ್ಲಿ ಓದುತ್ತಿದ್ದಳು. ಎರಡನೆಯವಳು ಶಶಿ, ಕಡೆಯವಳು ಚಂದ್ರಾ. ಮಕ್ಕಳೂ ಓದಿನಲ್ಲಿ ದಡ್ಡರಲ್ಲ. ರೂಪ ಒಳ್ಳೆಯ ಅಂಕಗಳನ್ನು ತೆಗೆದುಕೊಂಡು ತೇರ್ಗಡೆ ಯಾದರೂ ಅವಳನ್ನು ಮುಂದೆ ಓದಿಸಲು ರಂಗಣ್ಣ ಶಕ್ತನಾಗಿರಲಿಲ್ಲ. ಈ ಚಿಂತೆ ಯಿಂದಲೇ ರಂಗಣ್ಣ ಆಗಾಗ್ಗೆ ವ್ಯಥೆ ಪಡುತ್ತಿದ್ದ.

ಆದರೆ ರೂಪ ನಿರಾಶೆಗೊಳ್ಳಲಿಲ್ಲ, ತಂಗಿ ಯರನ್ನು ಪೋಷಿಸುವ, ಮನೆಗೆಲಸವನ್ನು ತೂಗಿಸಿಕೊಂಡು ಹೋಗುವ, ಅಪ್ಪನಿಗೆ ತೋಟದಲ್ಲಿ ಸಹಾಯ ಮಾಡುವ ಹೊಸ ಜವಾಬ್ದಾರಿಯನ್ನು ಬಹಳ ಸಂತೋಷ ದಿಂದಲೇ ಸ್ವೀಕರಿಸಿದಳು.

ಈಗ ಎರಡು ವರ್ಷಗಳಿಂದ ಸರಿಯಾಗಿ ಮಳೆ ಬಾರದ ಕಾರಣ ರಂಗಣ್ಣನಿಗೆ ತೋಟ ದಲ್ಲಿ ನಿರೀಕ್ಷಿಸಿದ ಬೆಳೆ ಬರಲಿಲ್ಲ. ಮೊದಲೇ ಸಾಲದ ಹೊರೆ, ಜೊತೆಗೆ ಮಳೆ ಬರದೆ ಬೆಳೆ ಕೈಕೊಟ್ಟಿದ್ದರಿಂದ ರಂಗಣ್ಣ ಮತ್ತೂ ಕಂಗೆಟ್ಟ. ಏನಾದರೂ ಮಾಡಿ ಈ ಸಾಲದ ಹೊರೆಯಿಂದ ಹೊರಬರಬೇಕು, ಹೇಗೆ? ಇರುವ ತೋಟದಲ್ಲಿಯೇ ವರ್ಷವೆಲ್ಲಾ ಬೆಳೆ ಬೆಳೆದು ಸಾಲ ತೀರಿಸಬೇಕು. ಎಂಬ ನಿರ್ಧಾರಕ್ಕೆ ಬಂದ. ಬ್ಯಾಂಕ್‌ನಲ್ಲಿ ತೋಟ ವನ್ನು ಆಧಾರವಾಗಿಟ್ಟು ಸಾಲ ಪಡೆದು ಬೋರ್‌ವೆಲ್ ತೆಗೆಸುವ ನಿರ್ಧಾರಕ್ಕೆ ಬಂದ. ನಿರ್ಧಾರಕ್ಕೆ ಮಗಳು ರೂಪಳೂ ಸಹ ಅನುಮತಿಸಿದಳು. ರೂಪ ತೋಟದಲ್ಲಿ ಹಗಲು ರಾತ್ರಿ ದುಡಿದು ಸಾಲ ತೀರಿಸಿ ತಂಗಿ ಯರಿಗೆಲ್ಲ ಒಳ್ಳೆಯ ಕಡೆಗೆ ಮದುವೆ ಮಾಡುವ ಕನಸು ಕಂಡಳು.

ಆದರೆ ಕನಸು ಎಂದಿಗಾದರೂ ನಿಜ ವಾದೀತೇ? ಬೋರ್‌ವೆಲ್ ಯಂತ್ರವೂ ಬಂದಿತು. 400 ಅಡಿ ಭೂಮಿಯ ಒಳಗೂ ಕೊರೆಯಿತು. ಆದರೆ ಸಿಗಬೇಕಾದ ನೀರು ಮಾತ್ರ ದೊರಕಲಿಲ್ಲ. ಇನ್ನು ಕೊರೆಯುವುದು ಸಾಧ್ಯವಿಲ್ಲವೆಂದು ಬಂದವರು ಹೋದರು. ರಂಗಣ್ಣ ನಿರಾಶನಾದ. ನೀರು ಸಿಕ್ಕೇ ಸಿಗುತ್ತದೆ, ಬೆಳೆ ಬೆಳೆದು ತಾನು ಸಾಲವಿಮುಕ್ತನಾಗು ತ್ತೇನೆಂದುಕೊಂಡದ್ದೆಲ್ಲ ಕನಸಾದಾಗ ರಂಗಣ್ಣ ನಿಗೆ ದಿಕ್ಕೇ ತೋಚಲಿಲ್ಲ. ಇರುವ ಸಾಲಕ್ಕೆ ಮತ್ತಷ್ಟು ಸೇರ್ಪಡೆ, ಬ್ಯಾಂಕಿನವರು ಬಂದು ದಿನಾಲೂ ಹಿಂಸಿಸಲು ಪ್ರಾರಂಭಿಸಿದರು. ಮನೆಯೆಂಬುದು ನಿತ್ಯ ನರಕವಾಗಿ, ಮುಂದೆ ದಾರಿ ಕಾಣದ ರಂಗಣ್ಣ ಒಂದು ದಿನ ಮಕ್ಕಳು ಮನೆಯಲ್ಲಿಲ್ಲದ ಸಮಯದಲ್ಲಿ ನೇಣಿಗೆ ಶರಣಾಗಲು ಪ್ರಯತ್ನಿಸಿದ. ಆದರೆ ಅಕ್ಕಪಕ್ಕ ದವರು ಇದನ್ನು ತಿಳಿದು ತಪ್ಪಿಸಿ ರಂಗಣ್ಣನಿಗೆ ಬುದ್ಧಿ ಹೇಳಿದರು.

ರೂಪಳ ಚಿಕ್ಕಮ್ಮನ ಮಗಳು ಶ್ರೀಲತಾ ಬೆಂಗಳೂರಿನಲ್ಲಿ ಮದುವೆಯಾಗಿ ವಾಸಿಸು ತ್ತಿದ್ದಳು. ರೂಪಳ ಕಷ್ಟ ನೋಡಲಾಗದೆ ಬೆಂಗಳೂರಿನಲ್ಲಿ ದುಡಿಯುವ ದಾರಿ ನೂರಾರಿದೆ ಎಂದು ಧೈರ್ಯ ತುಂಬಿ ಕರೆದು ಕೊಂಡು ಬಂದಳು.

ಹುಟ್ಟಿದಾಗಿನಿಂದ ತನ್ನ ಮನೆಬಿಟ್ಟು ಹೊರಬಂದಿರದ ರೂಪಳಿಗೆ ಹೊಸ ಪ್ರಪಂಚಕ್ಕೆ ಕಾಲಿಟ್ಟಾಗ ದಿಗ್ಭ್ರಮೆಗೊಂಡಳು. ಮನಸ್ಸಿಗೆ ಹೇಳಲಾಗದ ಸಂಕಟ, ತಂ ತಂಗಿಯರನ್ನು ಬಿಟ್ಟು ಬಂದ ದುಃಖ, ದುಡಿಯಬೇಕೆಂಬ ಅನಿವಾರ್ಯತೆಯಿಂದ ರೂಪ ಬಳಲಿದಳು. ಆದರೆ ಶ್ರೀಲತಾಳ ಸಾಂತ್ವನ ಮತ್ತು ಧೈರ್ಯ ತುಂಬಿದ ಮಾತು ಗಳಿಂದ ಚೇತರಿಸಿಕೊಂಡು ಶ್ರೀಲತಾಳ ಮನೆಯ ಬಳಿಯೇ ಇದ್ದ ಗಾರ್ಮೆಂಟ್ ಕಾರ್ಖಾನೆಗೆ ಸೇರಿಕೊಂಡಳು. ಅವಳಿಗೆ ಕಾರ್ಖಾನೆ ಎಂದರೆ ಗೊತ್ತಿಲ್ಲ, ಅಲ್ಲಿಯ ಕೆಲಸ ಕಾರ್ಯಗಳೊಂದೂ ತಿಳಿಯದಿದ್ದರೂ ಅಲ್ಲಿನ ಸೂಪರ್‌ವೈಸರ್ ಶ್ರೀಲತಾಳ ಪರಿಚಯದ ಮೇರೆಗೆ ಹೆಲ್ಪರ್ ಕೆಲಸಕ್ಕೆ ತೆಗೆದುಕೊಂಡರು. ಮೊದಲ ತಿಂಗಳ ಸಂಬಳ 2300 ಸಂಬಳ ನಿಗದಿ ಮಾಡಿದಾಗ ರೂಪಳಿಗೆ ಆದ ಸಂತಸ ಅಷ್ಟಿಷ್ಟಲ್ಲ. ಒಂದು ತಿಂಗಳೂ ತನ್ನನ್ನು ಮನೆ ಯಲ್ಲಿಟ್ಟುಕೊಂಡಿದ್ದ ಶ್ರೀಲತಾಳಿಗೆ ಹೇಳಿ, ತನ್ನಂತೆಯೇ ಇದ್ದ ನಾಲ್ಕು ಕಾರ್ಮಿಕ ರೊಂದಿಗೆ ಬೇರೆಯ ರೂಮ್ ಬಾಡಿಗೆ ತೆಗೆದುಕೊಂಡು ಜೀವನ ಮಾಡ ತೊಡಗಿದಳು.

ಕಾರ್ಖಾನೆಯ ಜೀವನ ತಾನು ತಿಳಿ ದಷ್ಟು ಸುಲಭವಲ್ಲ, ಅಲ್ಲಿಯೂ ಹಲವಾರು ತೊಂದರೆಗಳಿವೆ ಎಂದು ತಿಳಿದಿದ್ದು ಕೆಲವು ಕಾಲ ಕೆಲಸ ಮಾಡಿದ ನಂತರವೇ. ಆದರೂ ಸಾಲ ತೀರಿಸಲೇ ಬೇಕಾಗಿತ್ತು. ಬರುವ ಸಂಬಳದಲ್ಲಿ 1000-00 ರೂ. ಗಳನ್ನು ತಾನಿಟ್ಟುಕೊಂಡು ಉಳಿದ ಹಣವನ್ನು ಸಾಲ ತೀರಿಸಲು ಕಳುಹಿಸುತ್ತಿದ್ದಳು. ಕಾರ್ಖಾನೆ ಯಲ್ಲಿ ಒತ್ತಡ, ಕೆಲವೊಮ್ಮೆ ಗೌರವವಿಲ್ಲದ ಬೈಗುಳ, ಸೂಪರ್‌ವೈಸರ್‌ಗಳ ವಕ್ರದೃಷ್ಟಿ ಯನ್ನು ಎದುರಿಸಿಯೂ ಧೈರ್ಯಗುಂದದೆ ಕೆಲಸ ಮುಂದುವರೆಸಿದಳು. ತನ್ನ ಜೊತೆ ಯವರ ಕಷ್ಟಕ್ಕೆ ಹೋಲಿಸಿದರೆ ತಾನೇ →




Scanned with OKEN Scanner

ಕತೆ

# ನ್ಯಾಯಕ್ಕೆ ಸಿಕ್ಕ ಫಲ

ಲಕ್ಷ್ಮಿಯ ಮನಸ್ಸಿಗೆ ಕಸಿವಿಸಿ. ಏನಿದು ಧೂರ್ತತನ! PM ಎನಿಸಿಕೊಂಡವನು, ಹೊಟ್ಟೆಪಾಡಿಗಾಗಿ ಬರುವ 18–20 ವರ್ಷದ ಹೆಣ್ಣುಮಕ್ಕಳ ಅಸಹಾಯಕತೆಯನ್ನು ಬಳಸಿಕೊಂಡು ಸದಾ ಕ್ಯಾಬಿನ್‌ಗೆ ಕರೆಸಿಕೊಂಡು ಅವರ ಮೈಕೈ ಮುಟ್ಟುತ್ತಾ ಮೋಜುಮಾಡುತ್ತಾನೆ. ಹಾಗೆ ನೋಡಿದರೆ ಆ ವಯಸ್ಸಿನ ಮೊಮ್ಮಕ್ಕಳಿರಬೇಕು ಅವನಿಗೆ.

ಇವನ ಈ ಚಪಲವನ್ನು ಲಕ್ಷ್ಮಿ ಕೆಲಸಕ್ಕೆ ಸೇರಿದಾಗಿನಿಂದ ನೋಡುತ್ತಲೇ ಇದ್ದಾಳೆ. ಊಟದ ಸಮಯದಲ್ಲಿ, ಕಾರ್ಖಾನೆ ಬಿಟ್ಟಾಗಲೆಲ್ಲಾ ಹುಡುಗಿಯರನ್ನು ಕರೆದು, ಅವನು ಹೇಳಿದಂತೆ ಕುಣಿಯದಿರಲು ಬುದ್ಧಿಮಾತು ಹೇಳಿದ್ದಾಳೆ. ಹಾಗೆ ಹೇಳಿದಾಗಲೆಲ್ಲಾ ಆ ಹುಡುಗಿಯರ ಕಣ್ಣಲ್ಲಿ ನೀರಾಡುವುದೇ ಹೊರತು ಉತ್ತರ ಬರುವುದಿಲ್ಲ.




ಇದನ್ನು ಹೀಗೆ ಬಿಟ್ಟರೆ ಸರಿಹೋಗುವುದಿಲ್ಲ ಎಂದು ಓನರ್‌ಗೆ ವಿವರವಾದ ಪತ್ರ ಬರೆದು, PMನ ದುರ್ನಡತೆಯನ್ನು ತಿಳಿಸಿದ್ದಳು, ಒಂದು ದಿನವಾಯಿತು, ಎರಡು ದಿನವಾಯಿತು, ಮೂರನೆಯ ದಿನವಾಯಿತು. ನಾಲ್ಕನೆ ದಿನ ನಾಮಕಾವಸ್ಥೆಯಾಗಿ ಇದ್ದ ವಿಚಾರಣಾ ಸಮಿತಿಯಿಂದ 'ವಿಚಾರಣೆಯ ನಾಟಕ' ಶುರುವಾಯಿತು. PM ಬೆವರತೊಡಗಿದ್ದ. ಎಲ್ಲರೂ ಲಕ್ಷ್ಮೀ ಪರ ನಿಂತರು. ಹುಡುಗಿಯರು ಸಾಕ್ಷಿ ಹೇಳಿದರು. ಲಕ್ಷ್ಮಿ ಹಿರಿಹಿರಿ ಹಿಗ್ಗಿದಳು. 'ನ್ಯಾಯಕ್ಕೆ ಜಯ ಸಿಕ್ಕೇ ಸಿಗುತ್ತದೆ' ಎಂದು ಕಾದಳು. ಕಡೆಗೊಂದು ದಿನ ಈಕೆಗೆ ನೋಟಿಸ್ ನೀಡಲಾಯಿತು.

"ನೀವು 1 ಗಂಟೆಗೆ ಕೇವಲ 50 ಪೀಸ್ ಪ್ರೊಡಕ್ಷನ್ ನೀಡುತ್ತಿದ್ದೀರಿ. ಗಂಟೆಗೆ 150 ಪೀಸ್ ಸಾಧ್ಯ ಎಂದು ಇಂಜನಿಯರ್ ಅಭಿಪ್ರಾಯ ಪಟ್ಟಿರುತ್ತಾರೆ. ಹಲವು ಎಚ್ಚರಿಕೆಯ ನಂತರವು ನೀವು ನಿಮ್ಮ ತಪ್ಪು ತಿದ್ದಿಕೊಳ್ಳದ ಕಾರಣ ನಿಮ್ಮನ್ನು ಕೆಲಸದಿಂದ ವಜಾಗೊಳಿಸಲಾಗಿದೆ."

ಕಡೆಯಲೊಂದು ಸಾಲು ಸೇರಿಸಲಾಗಿತ್ತು. "ಮೇಲಿನವರ ತಪ್ಪು ಹುಡುಕುವುದು ನಿಮ್ಮ ಕೆಲಸವಲ್ಲ".

→

ಪರವಾಗಿಲ್ಲ ಎಂದು, ಅವರಿಗೂ ಸಾಂತ್ವನ ಹೇಳುತ್ತಿದ್ದಳು. ಕಾರ್ಖಾನೆಯಲ್ಲಿ ತನ್ನ ಜೊತೆಯ ಕಾರ್ಮಿಕರಿಗೆ ತೊಂದರೆಯಾದಾಗ ಸಹಾಯ ಮಾಡುತ್ತಿದ್ದಳು. ಹೆಲ್ಪರ್ ಕೆಲಸ ಮಾಡುತ್ತಲೇ ಟೈಲರ್ ಕೆಲಸ ಕಲಿತುಕೊಂಡು ಸಂಬಳ ಒಂದಿನ್ನೂರು ರೂ. ಹೆಚ್ಚು ಬರುವಂತಾದಾಗ ಅವಳಿಗೇ ತನ್ನ ಶಕ್ತಿಯ ಬಗ್ಗೆ ಆತ್ಮ ವಿಶ್ವಾಸ ಮೂಡಿತು. ತನ್ನ ತಂಗಿಯನ್ನೂ ಸಹ ಬೆಂಗಳೂರಿಗೆ ಕರೆದುಕೊಂಡು ಬಂದಾಗ ಅವರಿಗೆ ಕೆಲಸ ಸಿಗುವುದು ಅಷ್ಟು ಕಷ್ಟವಾಗಲಿಲ್ಲ.

ಹಳ್ಳಿಯಲ್ಲಿ ಬೆಳೆದ ತಾನು ತನ್ನ ತಂಗಿಯರು, ಬೆಂಗಳೂರಿಗೆ ಬಂದು, ತನ್ನ ಕಾಲ ಮೇಲೆ ನಿಂತು, ಹಲವಾರು ಕಷ್ಟ ಕಾರ್ಪಣ್ಯಗಳನ್ನು ಎದುರಿಸಿ, ತಂದೆಯ ಸಾಲ ತೀರಿಸಿದುದು ರೂಪಳ ಮುಂದಿನ ಜೀವನವನ್ನು ನಡೆಸಲು ಬಹಳ ಸಹಾಯಮಾಡಿತು. ಕಷ್ಟಗಳನ್ನು ಎದೆಗುಂದದೆ ಎದುರಿಸಿ, ಜೀವನವನ್ನು ಹಸನಾಗಿಸಿಕೊಂಡು ಉಳಿದವರಿಗೆ ಮಾದರಿಯಾಗಿ ನಿಂತಳು. ತನ್ನ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀಧರನನ್ನು ಮದುವೆಯಾದಾಗ ಅವಳಿಗೆ 25 ವರ್ಷ. ತಂಗಿಯರಿಗೆ ಅಪ್ಪ ಮದುವೆ ಮಾಡಿದಾಗ ಕೈಲಾದ ಸಹಾಯಮಾಡಿ, ಅವನ ಹೆಮ್ಮೆಯನ್ನು ಹೆಚ್ಚಿಸಿದಳು. ನೋಡಪ್ಪ ನನ್ನ ಮಗಳೂ ಯಾವ ಮಗನಿಗೂ ಕಡಿಮೆ ಇಲ್ಲ ಎಂದು ರಂಗಣ್ಣ ಎದೆಯುಬ್ಬಿಸಿ ಊರಲ್ಲೆಲ್ಲ ಹೇಳಿಕೊಂಡು ತಿರುಗಿದ. ಆತ್ಮಹತ್ಯೆಯ ಯೋಚನೆ ಮಾಡಿದ್ದ ರಂಗಣ್ಣ ಇವನೇಯೇ ಎಂದು ಊರಿನ ಜನ ಮೂಗಿನ ಮೇಲೆ ಬೆರಳಿಟ್ಟರು. ☐

## ಗಾರ್ಮೆಂಟ್ಸ್ ಗಾದೆಗಳು

☺ ಹೊಲ್ಯೋದು ಫಾರಿನ್ ಕೋಟು
ಸಂಬ್ಳ ಮಾತ್ರ ಫುಟ್‌ಪಾತ್ ರೇಟು ।

☺ ಪ್ರೊಡಕ್ಷನ್ ತಲೆಕೆಡಿಸ್ತು
ಬೈಗುಳ ಮನಸ್ಸು ಕೆಡಿಸ್ತು ।

☺ ಕಾರ್ಮಿಕರು ಬೆಳ್ಳಿ
ಪ್ರೊಡಕ್ಷನ್ ಬಂಗಾರ ।

☺ ಆಲ್ಟ್ರೇಷನ್‌ನಲ್ಲಿ ಹೋದ ಮಾನ
ಪ್ರೊಡಕ್ಷನ್ ಕೊಟ್ರೂ ಸಿಗಲ್ಲ ।

☺ ಪಾಪಿ ಟಾರ್ಗೆಟ್ ಮುಗ್ಸುದ್ರೂ
ಓಟಿ ತಪ್ಪಲ್ಲ ।

☺ ಓಟಿ ಮಾಡೋರು ಕುರಿ
ದುಡ್ಡು ಮಾಡೋರು ನರಿ ।

## ಕಪ್ಪುಹಣದ ಮಾಲೀಕರು

ನೀರಿಗಾಗಿ ನಿಂತರು ನೀರೆಯರು
ಓಟಿಗಾಗಿ ನಿಂತರು ರಾಜಕಾರಣಿಗಳು
ಸೀಮೆಎಣ್ಣೆಗಾಗಿ ನಿಂತರು ಅತ್ತೆಯರು
ಹಕ್ಕಿಗಾಗಿ ನಿಂತರು ಸೊಸೆಯಂದಿರು.
ಸಿನಿಮಾ ಟಿಕೇಟಿಗಾಗಿ ನಿಂತರು ಸೋಮಾರಿಗಳು.
ಸಾರಾಯಿಗಾಗಿ ನಿಂತರು ಸುಳ್ಳುಗಾರರು
ಭಿಕ್ಷೆಗಾಗಿ ನಿಂತರು ಅಸಹಾಯಕರು
ಗ್ಯಾಸಿಗಾಗಿ ನಿಂತರು ರಿಕ್ಷಾ ಚಾಲಕರು
ಎಲ್ಲಾ ನೋಡುತ್ತಾ ಕುಳಿತಿಹರು ಕಣ್ಣಿದ್ದ ಕುರುಡರು
ಅವರೇ ಅವರು ಕಪ್ಪುಹಣದ ಮಾಲೀಕರು

–ರಮಾಮಣಿ
ವಿ.ಎಫ್. ಇಂಡಿಯಾ



## ಗಾಂಧಿ ತತ್ವ ಹೇಳುವರು

ಗಾಂಧಿ ತತ್ವ ಹೇಳುವರು
ಸೇಂದಿಯ ಕುಡಿಯುತ ಕುಳಿತಿಹರು
ಬುದ್ಧನ ಧರ್ಮಕೆ ತಲೆತೂಗುವರು
ಬಿರಿಯಾನಿ ತಿಂದು ತೇಗುವರು.
ಓಟಗಾಗಿ ಕಾಲು ಮುಗಿಯುವರು
ಸೀಟು ಸಿಕ್ಕ ಮೇಲೆ ಕಾಲು ಮುರಿಯುವರು.
ಸತ್ಯಮೇವ ಜಯತೇ ಎಂದು ಹೇಳುವರು
ಸುಳ್ಳಿನ ಭಾಷಣ ಮಾಡುವರು.
ಭಗವದ್ಗೀತೆ ಹೇಳುವರು
ಬಾಂಬಿನ ದೊರೆ ಇವರಾಗುವರು.
ಹಾಲಿನ ಮನಸಿನ ಮುಗ್ಧರನು
ಹಾರ ತುರಾಯಿಗಳಿಂದ ಸನ್ಮಾನಿಸುವರು.

–ರಮಾಮಣಿ
ವಿ.ಎಫ್. ಇಂಡಿಯಾ

## "ನಗಿಸುವವರು"

ಕಾಸು ಕೊಟ್ಟು ನಗಿಸುವವರು
ಇವರು,
ಕತ್ತಲ ಬಸುರಲ್ಲಿ
ಸೆರಗ ಕದಿಯುವವರು,......

ಸುರಿವ ಮಳೆಯ ನಂತರ
ಕಾಮನ ಬಿಲ್ಲ
ತೋರಿಸುವವರು,
ನಗುವೋ, ಅಳುವೋ, ತಿಳಿಯದವರು,.......


ಮಹಲಲ್ಲಿ ವಾಸಿಸುತ್ತಾ
ಮಣ್ಣಾಗುವವರು,
ಜೊತೆಗಿರುವವರ ಆಸೆ ಹೆಚ್ಚಿಸಿ
ಸಿಮೆಂಟಿನ ಸಮಾಧಿ
ಕಟ್ಟುವವರು,........

ಇವರೇ ಆ ...... ನಗಿಸುವ ......!
ಜನರ ಮನಸ್ಸಿನ ಬಯಕೆ
ಅರಿತವರು,
ಅರಿತ ಆಸೆಗಳ ಬೇಕಾದಾಗ
ಗುಂಡಿಕ್ಕಿ ಕೊಲ್ಲುವವರು .......

ರಾಣಿ

## ಜವಾಬು

ಸೂಜಿ–ದಾರ ಪೋಣಿಸಿ
ಬಟ್ಟೆ ಬಟ್ಟೆ ಸೇರಿಸಿ
ತುಂಬುತೇವೆ ಮಾಲೀಕರ ಜೇಬು
ಮನಸು ಮನಸ ಸೇರಿಸಿ
ಹಕ್ಕಿನರಿವು ಮೂಡಿಸಿ
ನೀಡಲಾರವೇ ಅವರಿಗೆ ಜವಾಬು ?






Scanned with OKEN Scanner

# ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳಿಗಾಗಿ ನಡೆಸಿದ ವಿವಿಧ ಕಾರ್ಯಕ್ರಮಗಳು









Scanned with OKEN Scanner



ಹಿರಿಯ ಗಾರ್ಮೆಂಟ್ಸ್ ಕಾರ್ಮಿಕರನ್ನು ಸನ್ಮಾನಿಸಿದ ಸಂದರ್ಭ



ದೆಹಲಿಯ ಎನ್.ಟಿ.ಯು.ಐ. ಸಂಸ್ಥಾಪನಾ ದಿನದಂದು ಮುನ್ನಡೆ
ಕಾರ್ಯಕರ್ತರಿಂದ ಕ್ರಾಂತಿಗೀತೆ



ಮಹಿಳಾ ದಿನಾಚರಣೆಯನ್ನು
ಸಂಭ್ರಮಿಸಿದ್ದು ಹೀಗೆ...



ಕ್ವಿಲ್ಟ್‌ನ ತಯಾರಿಯಲ್ಲಿ ಮಹಿಳಾ ಕಾರ್ಮಿಕರು



ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ
ಪಿ.ಎಫ್ ಅಧಿಕಾರಿಗಳಿಂದ ಕಾನೂನು ತರಬೇತಿ



ಕಾರ್ಮಿಕರ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ

ಸಂಪಾದಕ ಮಂಡಳಿ ಹಾಗೂ ಪ್ರಕಾಶಕರು : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ. : 2675 1320
ಮುದ್ರಣ : ಇಳಾ ಮುದ್ರಣ, ಬೆಂಗಳೂರು - 560 026. ದೂ. : 32715773 / 26757159

Scanned with OKEN Scanner